# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

75,000
HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ:14 • ನೋಂದಣಿ ನಂ.:KARKAN27911 • ವಿಜಯನಗರ • 06.07.2024 • ಶನಿವಾರ • ಪುಟ:04 • ಬೆಲೆ:2
Volume:02 • Issue:14 • Reg.No:KARKAN27911 • VIJAYANAGARA • 06.07.2024 • Saturday • Page:04 • Rs:2



HAMPI TIMES VIJAYANAGARA

SSLC ಹೈ ಸ್ಕೋರ್‌ಗೆ ಪ್ರಶ್ನೋತ್ತರ ಸರಣಿ

ಹಂಪಿ ಟೈಮ್ಸ್‌ನಲ್ಲಿ ಹಂಪಿ ಟೈಮ್ಸ್‌ಮಾರ್ಗದರ್ಶಿ ಜು.9 ರಿಂದ.. ನಿರೀಕ್ಷಿಸಿ...

Scan To Read
Join Us


# ಹೊಲಗಳಿಗೆ ವಿಷಯುಕ್ತ ನೀರು ಹರಿಸುವ ಸೌತೆಕಾಯಿ ಸಂಸ್ಕರಣ ಘಟಕ ಮುಚ್ಚುವಂತೆ ಡಿಸಿಗೆ ರೈತರ ಒತ್ತಾಯ

## ಪ್ರಯೋಗಾಲಯದ ವರದಿ ವಿಷಯುಕ್ತ ನೀರೆಂದು ದೃಢಪಟ್ಟರೆ ಘಟಕ ಮುಚ್ಚಲು ಆದೇಶ ನೀಡಿ ಎಂದು ಡಿಸಿ ತಾಕೀತು

■ **ಹಂಪಿ ಟೈಮ್ಸ್ ಕೊಟ್ಟೂರು**

ರಾಂಪುರ ಕ್ರಾಸ್ ಬಳಿ ಇರುವ ಬ್ಲೂಸಂ ಶೋವರ್ಸ ಆಗ್ರೋ ಸೌತೆ ಸೀಡ್ಸ್ ಕಂಪನಿ ವಿಷಯುಕ್ತ ತ್ಯಾಜ್ಯ ನೀರನ್ನು ಹೊರಬಿಡುವುದರಿಂದ ಪರಿಸರ ಮಾಲಿನ್ಯ ಹಾಗೂ ರೈತರ ಭೂಮಿ ಹಾಳಾಗುತ್ತಿವೆ ಎಂದು ಆರೋಪಿಸಿ ಶುಕ್ರವಾರ ಕೊಟ್ಟೂರಿನಲ್ಲಿ ಆಯೋಜಿಸಿದ್ದ ಜನ ಸ್ಪಂದನ ಕಾರ್ಯಕ್ರಮದಲ್ಲಿ ರೈತ ಎಂಎಂಜೆ ಮೂಗಣ್ಣ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರಗೆ ಮನವಿ ಸಲ್ಲಿಸಿದರು.

ತಕ್ಷಣವೇ ಜಿಲ್ಲಾಧಿಕಾರಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ರವಿಕುಮಾರ್ ಹಾಗೂ ಗ್ರಾಪಂ ಅಭಿವೃದ್ಧಿ ಅಧಿಕಾರಿ ಉಮಾಪತಿ ಅವರಿಗೆ ಸ್ಥಳ ಮಹಜರು ಮಾಡಿ, ನೀರನ್ನು ಪ್ರಯೋಗಾಲಯಕ್ಕೆ ಕಳುಹಿಸಿ ವಿಷಯುಕ್ತ ನೀರು ಎಂದು ಪರೀಕ್ಷೆಯಿಂದ ದೃಢಪಟ್ಟರೆ ಸೌತೆ ಸಂಸ್ಕರಣ ಘಟಕವನ್ನು ಶಾಶ್ವತವಾಗಿ ಮುಚ್ಚಲು ಆದೇಶ ನೀಡಿ ಎಂದು ತಾಕೀತು ಮಾಡಿದರು.

ರೈತ ಎಂಎಂಜೆ ಮೂಗಣ್ಣ, ಸೌತೆಯನ್ನು ಸಂಸ್ಕರಣ ಮಾಡಿದ ನೀರು ಹೊಲಗಳಿಗೆ ಹರಿಯುವುದರಿಂದ ಸಂಪೂರ್ಣ ವಿಷಯುಕ್ತವಾಗಿದೆ. ಇದರಿಂದ ಯಾವುದೇ ಬೆಳೆ ಬೆಳೆಯದಿರುವುದು ಒಂದು ಸಮಸ್ಯೆಯಾದರೆ, ಆ ನೀರಿನ ದುರ್ವಾಸನೆಯಿಂದಾಗಿ ಸುತ್ತಮುತ್ತ ರೈತರು ಕೃಷಿ ಚಟುವಟಿಕೆ ಮಾಡುವುದು ಕಷ್ಟವಾಗಿದೆ ಎಂದು ಜಿಲ್ಲಾಧಿಕಾರಿ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು.

ಮನುಷ್ಯರಿಗೆ ಮತ್ತು ಹೊಲಗಳಿಗೆ ಹಾನಿಕಾರಕ ನೀರಿನ ಪರಿಣಾಮ ಕೊಟ್ಟೂರು ಸಮೀಪವಿದ್ದ ಈ ಸೌತೆ ಸಂಸ್ಕರಣ ಘಟಕವನ್ನು ಸಾರ್ವಜನಿಕರ ವಿರೋಧದಿಂದಾಗಿ ಈ ಘಟಕವನ್ನು ಚಿರಬಿ ಸಮೀಪದಲ್ಲಿ ಸ್ಥಾಪಿಸಿದ್ದು, ಮನುಷ್ಯರಿಗೆ ಹಾಗೂ ಹೊಲಗಳಿಗೆ ಹಾನಿಕಾರವಾಗಿರುವುದರಿಂದ ಶಾಶ್ವತವಾಗಿ ಮುಚ್ಚಬೇಕೆಂದು ಅಲ್ಲಿದ್ದ ರೈತರೆಲ್ಲ ಒಕ್ಕೊರಲಿನಿಂದ ಜಿಲ್ಲಾಧಿಕಾರಿಗೆ ಒತ್ತಾಯಿಸಿದರು.



ಕಾನೂನು ವಿರುದ್ದವಾಗಿ ಒಂದೇ ಕಾಂಪೌಂಡ್‌ನಲ್ಲಿ ಎರಡು ಪ್ರತಿಷ್ಠಿತ ಕಾಲೇಜ್‌ಗಳಿವೆ. ಅಲ್ಲಿನ ಬಿಲ್ಡಿಂಗ್‌ಗಳಿಗೆ ಟ್ಯಾಕ್ಸ್ ಕಟ್ಟಿಲ್ಲ ಎಂದು ಸಾರ್ವಜನಿಕರೊಬ್ಬರು ಜಿಲ್ಲಾಧಿಕಾರಿಗಳ ಗಮನ ಸೆಳೆಯುತ್ತಿದ್ದಂತೆ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಸರುಲ್ಲಾರನ್ನು ತರಾಟೆಗೆ ತೆಗೆದುಕೊಂಡು ಜಿಲ್ಲಾಧಿಕಾರಿ, ಟ್ಯಾಕ್ಸ್ ಕಟ್ಟಿಸಿಕೊಳ್ಳದಿರುವ ಪ್ರಶ್ನಿಸಿ ತಕ್ಷಣ ಆ ಕಾಲೇಜ್‌ಗೆ ನೋಟೀಸ್ ನೀಡಿ ಪೂರ್ಣ ಪ್ರಮಾಣದಲ್ಲಿ ಟ್ಯಾಕ್ಸ್ ಕಟ್ಟಿಸಿಕೊಳ್ಳಬೇಕೆಂದರು.

ಸಾರ್ವಜನಿಕರೊಬ್ಬರು, ಕೊಟ್ಟೂರು ಪಟ್ಟಣದಲ್ಲಿ ಪರವಾನಗಿ ಇಲ್ಲದೆ ರಕ್ತ ಪರೀಕ್ಷಾ ಕೇಂದ್ರಗಳು ನಾಯಿ ಕೊಡೆಗಳಂತೆ ಆರಂಭವಾಗಿದ್ದು, ಅಳತೆ ಮೀರಿ ಹಣವಸೂಲಿ ಮಾಡುತ್ತಿದ್ದಾರೆ ಎಂದು ಪ್ರಶ್ನೆಮಾಡಿದಾಗ, ಜಿಲ್ಲಾಧಿಕಾರಿ, ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರದೀಪ್ ಅವರಿಗೆ ಇಂತಹ ಕೇಂದ್ರಗಳನ್ನು ಪರಿಶೀಲಿಸಿ ಅನಧಿಕೃತವಾಗಿ ರಕ್ತಪರೀಕ್ಷೆ ಮಾಡುವವರ ವಿರುದ್ಧ ಕೇಸ್ ದಾಖಲಿಸುವಂತೆ ಸೂಚಿಸಿದರು.

ಇ-ಸ್ವತ್ತನ್ನು ಗ್ರಾಮ ಪಂಚಾಯಿತಿ ಪಿಡಿಒ, ಬಿಲ್ ಕಲೆಕ್ಟರ್‌ಗಳು ಅರ್ಜಿದಾರರ ಮನೆಗೆ ತಲುಪಿಸಬೇಕು ಎಂದು ಜಿಲ್ಲಾಧಿಕಾರಿ ಗ್ರಾಪಂ ಪಿಡಿಒಗೆ ತಾಕೀತು ಮಾಡುತ್ತಿದ್ದಂತೆ ಸಭೆಯಲ್ಲಿದ್ದ ಜನರು ಚಪ್ಪಳೆ ತಟ್ಟಿ ಜಿಲ್ಲಾಧಿಕಾರಿ ಕ್ರಮಕ್ಕೆ ಸ್ವಾಗತಿಸಿದರು.

ಕೊಟ್ಟೂರಿನಲ್ಲಿ ಧಾರ್ಮಿಕ ದತ್ತಿ ಇಲಾಖೆಯಿಂದ ಗೋಶಾಲೆ ಆರಂಭಿಸಬೇಕೆಂಬ ಸಾರ್ವಜನಿಕರ ಮನವಿಗೆ ಜಿಲ್ಲಾಧಿಕಾರಿ, ಧಾರ್ಮಿಕ ದತ್ತಿ ಇಲಾಖೆಯಿಂದ ಗೋಶಾಲೆ ಆರಂಭಿಸಲು ಅವಕಾಶವಿಲ್ಲವೆಂದು ತಿಳಿಸಿದರು.

ನಿಂಬಳಗೆರೆ, ಕೋಗಳಿ ಗ್ರಾಮ ಪಂಚಾಯಿತಿಗೆ ಅಭಿವೃದ್ಧಿ ಅಧಿಕಾರಿಗಳ ಮೇಲೆ ಸಾರ್ವಜನಿಕರು ದೂರು ನೀಡಿದಾಗ, ತಕ್ಷಣ ಹಾಜರಾಗದ ಇವರ ವಿರುದ್ದ ನೋಟೀಸ್ ನೀಡು ವಂತೆ ತಾಪಂ ಇಒ ರವಿಕುಮಾರ್‌ಗೆ ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ನೇಮಿರಾಜ್ ನಾಯ್ಕ, ಇನ್ನು ಐದು ವರ್ಷದಲ್ಲಿ ಹಗರಿಬೊಮ್ಮನಹಳ್ಳಿ ಕ್ಷೇತ್ರವನ್ನು ಸರ್ವ ತೋಮುಖವಾಗಿ ಅಭಿವೃದ್ಧಿಗೊಳಿಸುವುದಾಗಿ ಭರವಸೆ ನೀಡಿದರು.

ಇಂದು ನಡೆದ ಜನಸ್ಪಂದನ ಕಾರ್ಯಕ್ರಮಕ್ಕೆ ಆಹಾರ ಇಲಾಖೆ -3, ಕಂದಾಯ ಇಲಾಖೆ-61, ಪಶುಪಾಲನೆ-1, ಭೂಮಾಪನ-3, ಸಾರಿಗೆ-3, ಪಟ್ಟಣ ಪಂಚಾಯಿತಿ-19, ಎಪಿಎಂಸಿ-1, ಆರೋಗ್ಯ-1, ಸಿಡಿಪಿಒ-4, ತಾಲೂಕು ಪಂಚಾಯಿತಿ - 10, ಜೆಸ್ಕಾಂ-4, ತೋಟಗಾರಿಕೆ -1, ಶಿಕ್ಷಣ-2, ಕೃಷಿ-12, ಒಟ್ಟು-125 ಅರ್ಜಿಗಳು ಬಂದಿದ್ದು, ಸ್ಥಳದಲ್ಲೇ-12 ಅರ್ಜಿಗಳನ್ನು ಪರಿಹರಿಸಲಾಯಿತು. ಇನ್ನೂ ಬಾಕಿ- 113 ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗೆ ಸೂಚಿಸಿದರು.

ವೇದಿಕೆಯಲ್ಲಿ ಜಿಲ್ಲಾಧಿಕಾರಿ ದಿವಾಕರ್ ಶಾಸಕ ನೇಮಿರಾಜ್ ನಾಯ್ಕ, ತಹಶೀಲ್ದಾರ್ ಜಿ.ಕೆ. ಅಮರೇಶ, ಜಿಪಂ ಸಿ.ಇ.ಒ ಗೋಂಗ್ಜಾಯ್ ಮೊಹಮದ್ ಆಲಿ ಅಕ್ರಮ್ ಶಾ, ತಾಪಂ ಇಒ ರವಿಕುಮಾರ್, ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ, ಸಹಾಯಕ ಆಯುಕ್ತ ಚಿದಾನಂದ ಗುರುಸ್ವಾಮಿ ಇದ್ದರು.


ಮೈಕ್ರೋ ನ್ಯೂಸ್

ಮಾನ್ಸೂನ್ ಆಫರ್
ಜಾಹೀರಾತುಗಳ ಮೇಲೆ ಭಾರಿ ರಿಯಾಯಿತಿ
ಹೆಚ್ಚು ಪ್ರಚಾರ ಕಡಿಮೆ ಖರ್ಚು
ನಂ.1 ಸ್ಥಳೀಯ ದಿನಪತ್ರಿಕೆ ಹಂಪಿ ಟೈಮ್ಸ್
ಸಂಪರ್ಕಿಸಿ
94486 33038
94825 99089


## ಕೆಎಂಸಿ ಅಧ್ಯಕ್ಷರಾಗಿ ಡಾ.ಯೋಗಾನಂದ ರೆಡ್ಡಿ ಆಯ್ಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಬೆಂಗಳೂರಿನಲ್ಲಿ ಜು.2 ರಂದು ನಡೆದ ಚುನಾವಣೆಯಲ್ಲಿ ಕರ್ನಾಟಕ ವೈದ್ಯಕೀಯ ಪರಿಷತ್ತಿನ (ಕೆಎಂಸಿ) ಅಧ್ಯಕ್ಷರಾಗಿ ಬಳ್ಳಾರಿಯ ಖ್ಯಾತ ಮಕ್ಕಳ ತಜ್ಞರಾದ ಡಾ.ಯೋಗಾನಂದ ರೆಡ್ಡಿ ಆಯ್ಕೆಯಾಗಿದ್ದಾರೆ.



ಬಳ್ಳಾರಿಯ ಐಎಂಎ ಅಧ್ಯಕ್ಷರಾದ ಡಾ.ಶ್ರೀನಿವಾಸಲು ಡಿ. ಅತ್ಯಂತ ಅರ್ಹ ವ್ಯಕ್ತಿಗೆ ಈ ಸ್ಥಾನ ಸಿಕ್ಕಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಇದೇ ಚುನಾವಣೆಯಲ್ಲಿ ಮೈಸೂರಿನ ಕ್ಯಾನ್ಸರ್ ತಜ್ಞರಾದ ಡಾ.ರವಿ ಕೃಷ್ಣಪ್ಪ ಅವರು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದು, ಭಾರತೀಯ ವೈದ್ಯಕೀಯ ಸಂಘ ಬಳ್ಳಾರಿ ಶಾಖೆಯ ಕಾರ್ಯದರ್ಶಿ ಡಾ.ರಾಘವೇಂದ್ರ, ಉಪಾಧ್ಯಕ್ಷರಾದ ಡಾ.ಮಾಣಿಕ್ ರಾವ್ ಕುಲಕರ್ಣಿ, ಜಂಟಿ ಕಾರ್ಯದರ್ಶಿ ಡಾ.ಸಂಗೀತ ಕಟ್ಟೀಮನಿ, ಖಜಾಂಚಿ ಡಾ.ವಾರಿಜಾ ಟಿ., ಸಂಘದ ಸರ್ವ ಸದಸ್ಯರು ಹರ್ಷ ವ್ಯಕ್ತಪಡಿಸಿದ್ದಾರೆ.

## ಜಿ.ಪಂ ಸಿಇಓ ಎನ್.ಎಂ. ಅಲಿ ಅಕ್ರಮ್ ಶಾ ಅಧಿಕಾರ ಸ್ವಿಕಾರ

■ **ಹಂಪಿ ಟೈಮ್ಸ್ ಹೊಸಪೇಟೆ**

ಐಎಎಸ್ ಅಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಶಾ ವಿಜಯನಗರ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ನೂತನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ನಿರ್ಗಮಿತ ಜಿಪಂ ಸಿಇಓ ಸದಾಶಿವ ಪ್ರಭು ಬಿ ಅವರು ನೂತನ ಜಿಪಂ ಸಿಇಓ ಅವರಿಗೆ ಸ್ವಾಗತಿಸಿ, ಆತ್ಮೀಯವಾಗಿ ಬರಮಾಡಿಕೊಂಡು ಅಧಿಕಾರ ಹಸ್ತಾಂತರಿಸಿದರು.



2020ರ ಬ್ಯಾಚ್ ನ ಕರ್ನಾಟಕ ಕೇಡರನ ಐಎಎಸ್ ಅಧಿಕಾರಿಯಾಗಿರುವ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಶಾ ಅವರು ಮೂಲತಃ ಮಣಿಪುರ ರಾಜ್ಯದ ಇಂಪಾಲ್ ದವರಾಗಿದ್ದಾರೆ. ಕಂಪ್ಯೂಟರ್ ಸಾಯನ್ಸ್ ಎಂಜಿನಿಯರಿಂಗ್ ಅಧ್ಯಯನ ಮಾಡಿದ್ದಾರೆ.

ಇವರು ಈ ಮೊದಲು ವಿಜಯನಗರ ಜಿಲ್ಲೆಯಲ್ಲಿ ಕಳೆದ 12 ತಿಂಗಳಿನಿಂದ ಹೊಸಪೇಟೆ ಉಪ ವಿಭಾಗದ ಹಿರಿಯ ಸಹಾಯಕ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದರು.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
scan to read

ಎಸ್.ಎಸ್.ಎಲ್.ಸಿ. ಹಿಂದಿ ಪರೀಕ್ಷೆಯಲ್ಲಿ ಹೈ ಸ್ಕೋರ್ ಮಾಡಲು ಸುಲಭ ಮಾರ್ಗೋಪಾಯಗಳು

ಹಂಪಿಟೈಮ್ಸ್ ಪತ್ರಿಕೆಯಲ್ಲಿ ಹಿಂದಿ ಅಂಕಣ ಏಕೆ ಓದಬೇಕು?
ಪ್ರತಿವಾರವೂ ಹಿಂದಿ ವಿಷಯದ ಅತಿ ಮುಖ್ಯ ಪ್ರಶ್ನೆಗಳ ಕಲಿಕೆಯಾಗುವುದು.
ಇದು ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ನಿರಂತರ ಅಧ್ಯಯನಕ್ಕೆ ಆಧಾರ ಸ್ಥಂಭವಾಗಿದೆ.
ವಾರ್ಷಿಕ ಪರೀಕ್ಷೆಯಲ್ಲಿ ಸುಲಭವಾಗಿ ಅತಿ ಹೆಚ್ಚು ಅಂಕ ಪಡೆಯಲು ಪೂರಕವಾಗಿದೆ.
ವಾರ್ಷಿಕ ಪರೀಕ್ಷೆಯಲ್ಲಿ ಬರುವ ಸಂಭವನೀಯ ಪ್ರಶ್ನೆಗಳನ್ನು ಉತ್ತರ ಸಹಿತ ಕೊಡಲಾಗುವುದು.
ಸುಲಭವಾಗಿ ನೆನಪಿಟ್ಟುಕೊಳ್ಳಲು ಉತ್ತರಗಳನ್ನು ಕೀ ಪಾಯಿಂಟ್ ಗಳಲ್ಲಿ ಕೊಡಲಾಗುವುದು.
ಸಾಧರಣಾ ವಿದ್ಯಾರ್ಥಿಗಳು ಸುಲಭವಾಗಿ ಪಾಸಾಗಲು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು 80 ಕ್ಕೆ 80 ಅಂಕ ಪಡೆಯಲು ಇದು ಸಹಾಯಕವಾಗುತ್ತದೆ .
ಬೋರ್ಡ್ ಪರೀಕ್ಷೆಯ ನೀಲಿನಕ್ಷೆ ಅನುಗುಣವಾಗಿ ಕಲಿಕೆ ಸಾಗುವುದು.
ಹಿಂದಿ ವ್ಯಾಕರಣ, ಅನುರೂಪತಾ ಪ್ರಶ್ನೆಗಳು, ಒಂದು ವಾಕ್ಯದ ಪ್ರಶ್ನೆಗಳು, ಎರಡು ವಾಕ್ಯದ ಪ್ರಶ್ನೆಗಳು, ಮೂರು-ನಾಲ್ಕು ವಾಕ್ಯದ ಪ್ರಶ್ನೆಗಳನ್ನು ಉತ್ತರಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಗಳಿಸಲು ಸಹಾಯವಾಗಲಿದೆ.
ತಪ್ಪದೇ ಹಂಪಿಟೈಮ್ಸ್ ಪರೀಕ್ಷಾ ಮಾರ್ಗದರ್ಶಿ ಓದಿ ನಿಮ್ಮ ಫಲಿತಾಂಶ ಉತ್ತಮಪಡಿಸಿಕೊಳ್ಳಿ.
ನಿರೀಕ್ಷಿಸಿ...
ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ....

ದಿನಕ್ಕೊಂದು ವಿಷಯ
ಹಂಪಿ ಟೈಮ್ಸ್ ಮಾರ್ಗದರ್ಶಿ
COMING Soon
ಪ್ರತಿ ಶನಿವಾರ

jOiN US
94486 33038
www.hampitimes.com
epaper.hampitimes.com
Vijayanagara
hampitimes@gmail.com


# ಶ್ರಮಕ್ಕಿಂತ ಮಿಗಿಲಾದ ಆದಾಯ ಬೇಡವೆಂದ ಶರಣರು

## ಮುಖ್ಯಗುರು ಶರಣಯ್ಯ ಎಸ್.ಚರೇದ ಹೇಳಿಕೆ। ಕಾಯಕ ಸಿದ್ಧಾಂತ ಮಹತ್ವ ಸಾರಿದ ಶರಣರು




■ **ಹಂಪಿ ಟೈಮ್ಸ್ ಹೊಸಪೇಟೆ**

12ನೇ ಶತಕದಲ್ಲಿ ವಿಶ್ವಗುರು ಬಸವಣ್ಣನವರ ನೇತೃತ್ವದ ಸಾಮಾಜಿಕ ಧಾರ್ಮಿಕತೆಯ ಶರಣರ ವಚನ ಸಾಹಿತ್ಯದಲ್ಲಿ ಕಾಯಕ ದಾಸೋಹ ಪ್ರಸಾದ ತತ್ವಾಚರಣೆಯು ಮಹತ್ವ ಕಂಡಿತ್ತು. ಕಾಯಕದಿಂದ ಬಂದ ಸಂಪಾದನೆಯಲ್ಲಿಯೇ ಪ್ರಸಾದ ಸ್ವೀಕಾರಕೆ ಹಕ್ಕಿದೆ ಎಂದಿದ್ದರು ಶರಣರು ಎಂದು ನಗರದ ರಾಣಿ ಚೆನ್ನಮ್ಮ ಪ್ರೌಢ ಶಾಲೆಯ ಮುಖ್ಯಗುರು ಶರಣಯ್ಯ ಎಸ್. ಚರೇದ ಹೇಳಿದರು .

ನಗರದ ರಾಣಿ ಚೆನ್ನಮ್ಮ ಪ್ರೌಢ ಶಾಲೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತುನಿಂದ ಶುಕ್ರವಾರ ಜರುಗಿದ ಮಲ್ಲಾರಪ್ಪ ಎಲ್ಲವ್ವ ಕರಿಭೀಮಣ್ಣ ದತ್ತಿ, ಶ್ರೀಮತಿ ಕೆ.ಜಹಿರಾಬಿ ನಬೀಸಾಬ್ ದತ್ತಿ, ಹಂಪಸಾಗರದ ಪದ್ಮಾವತಿ ಬಾಯಿ ಶ್ರೀನಿವಾಸಾಚಾರ್ಯ ದತ್ತಿ, ಹಾಗೂ ಶ್ರೀಮತಿ ಸುಭದ್ರಮ್ಮ ಕರಣಂ ಭೀಮಸೇನರಾವ್ ದತ್ತಿ ಕಾರ್ಯಕ್ರಮದಲ್ಲಿ "ವಚನಗಳಲ್ಲಿ ಕಾಯಕ ಪರಿಕಲ್ಪನೆ" ಕುರಿತು ಉಪನ್ಯಾಸದಲ್ಲಿ ಮಾತನಾಡಿದರು. ಗಳಿಕೆಯ ಒಂದಿಷ್ಟನ್ನ ಸಮಾಜಕೆ ಧರ್ಮಕೆ ದಾಸೋಹವಾಗಿ ವಿನಿಯೋಗಿಸಬೇಕು. ಗಳಿಕೆ ಬಳಕೆ ಹಂಚಿಕೆ ಮೂಲಕ ಸಾಮಾಜಿಕ ಸಮತೆಯು ಕಾಯಕದ ಶರಣ ಸಿದ್ಧಾಂತವಿತ್ತು. ಕಾಯಕದ ವೃತ್ತಿಗಳಲ್ಲಿ ನಿಷ್ಠೆ ಶ್ರದ್ಧೆ ಜೊತೆಗೆ ಸಮಾನತೆಯನ್ನ ಶರಣರು ಕಂಡುಕೊಂಡರು. ತಳವಾರ ಕಾಮಿದೇವ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಣ್ಣ, ಆಯ್ದಕ್ಕಿ ಲಕ್ಕಮ್ಮ, ಹೀಗೆ ನೂರಾರು ಶರಣರು ತಮ್ಮ ವೃತ್ತಿ ಕಾಯಕದ ಮಹತ್ವವ ತಮ್ಮ ವಚನಗಳಲಿ ಸಾರಿದ್ದಾರೆ ಎಂದರು. "ಈಸಕ್ಕಿ ಆಶೆ ನಿಮಗೇಕಯ್ಯ ಈಶ್ವರನೊಪ್ಪ" ಎಂದು ಶರಣೆ ಲಕ್ಕಮ್ಮಳು ಪತಿ ಮಾರಣ್ಣ ತಂದಂತಹ ಹೆಚ್ಚಿನ ಅಕ್ಕಿ ಸಂಪಾದನೆಯನ್ನ ಬೇಡವೆಂದು, ಕಾಯಕದೊಳು ನಿರತನಾದೊಡೆ ಗುರು ದರ್ಶನವಾದರೂ ಲಿಂಗ ಪೂಜೆಯಾದರೂ ಮರೆಯಬೇಕು ಜಂಗಮದ ಹಂಗು ಹರಿಯಬೇಕು ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾದೆಡೂ ಕಾಯಕದೊಳಗು ಎಂದು ಶರಣೆ ಲಕ್ಕಮ್ಮಳ ವಚನೆಯು ಕಾಯಕದ ಹಿರಿಮೆಯ ತೋರಿಸಿದೆ. ಶರಣ ನುಲಿಯ ಚಂದಯ್ಯ ಅವರು ಹಳ್ಳ ಕೆರೆಯಲಿ ನೂಲಿಗಾಗಿ


>>4

## ವಿಜ್ಞಾನ

# ಚಂದ್ರನ ಇನ್ನೊಂದು ಬದಿ (ಮುಖ) ಏಕೆ ಕಾಣುವುದಿಲ್ಲ?

■ ಆರ್.ಬಿ.ಗುರುಬಸವರಾಜ

ಚಂದ್ರನನ್ನು ನೋಡುತ್ತಾ ಮಲಗಿದ್ದ ಸುಭಾಷಿಣಿ "ತಾತ, ನನಗೀಗ ಹದಿನೈದು ವರ್ಷ. ನನಗೆ ನೆನಪು ಬಂದಾಗಿನಿಂದಲೂ ಚಂದ್ರನ ಒಂದೇ ಬದಿ(ಮುಖ) ಕಾಣುತ್ತಿದೆಯಲ್ಲ. ಚಂದ್ರನ ಇನ್ನೊಂದು ಬದಿ ಏಕೆ ಕಾಣುವುದಿಲ್ಲ?" ಎಂದಳು. ಸುಭಾಷಿಣಿಯ ಪ್ರಶ್ನೆಗೆ ತಾತ ಸುಂದರವಾದ ಉತ್ತರ ನೀಡಿದರು.

ಚಂದ್ರನು ಭೂಮಿಯ ನೈಸರ್ಗಿಕ ಉಪಗ್ರಹವಾಗಿದ್ದು, ನಾವು ಯಾವಾಗಲೂ ಚಂದ್ರನ ಒಂದು ಬದಿಯನ್ನು ಮಾತ್ರ ನೋಡುತ್ತೇವೆ. ಏಕೆಂದರೆ ಚಂದ್ರನು ಭೂಮಿಯ ಸುತ್ತ ಪರಿಭ್ರಮಿಸುವ ವೇಗ ಮತ್ತು ಅದರ ಅಕ್ಷದ ಮೇಲೆ ತಿರುಗುವ ವೇಗ ಎರಡೂ ಒಂದೇ ಆಗಿವೆ. ಚಂದ್ರನು ಭೂಮಿಯ ಸುತ್ತ ಒಂದು ಸುತ್ತು ಹಾಗೂ ತನ್ನ ಅಕ್ಷದ ಮೇಲೆ ಒಂದು ಸುತ್ತು ಸುತ್ತಲು 27.3 ದಿನಗಳನ್ನು ತೆಗೆದುಕೊಳ್ಳುತ್ತದೆ. ಈ ಎರಡೂ ತಿರುಗುವ ವೇಗವು ಒಂದೇ ಆಗಿರುವುದರಿಂದ ಯಾವಾಗಲೂ ಚಂದ್ರನ ಒಂದೇ ಭಾಗವು ಭೂಮಿಯ ಕಡೆಗೆ ಮುಖ ಮಾಡುತ್ತದೆ. ಈ ವಿದ್ಯಮಾನವನ್ನು 'ಸಿಂಕ್ರೊನಸ್ ರೊಟೇಶನ್' ಅಥವಾ 'ಟೈಡಲ್ ಲಾಕಿಂಗ್' ಎಂದು ಕರೆಯಲಾಗುತ್ತದೆ.



ಇದರಿಂದ ಚಂದ್ರನ ಇನ್ನೊಂದು ಭಾಗವು ಶಾಶ್ವತವಾಗಿ ಭೂಮಿಯಿಂದ ಮರೆಮಾಡಲ್ಪಡುತ್ತದೆ.

ಸಿಂಕ್ರೊನಸ್ ತಿರುಗುವಿಕೆಯು ಭೂಮಿ ಮತ್ತು ಚಂದ್ರನ ನಡುವಿನ ಗುರುತ್ವಾಕರ್ಷಣೆಯ ಪರಸ್ಪರ ಕ್ರಿಯೆಯ ಪರಿಣಾಮವಾಗಿದೆ. ಭೂಮಿಯ ಗುರುತ್ವಾಕರ್ಷಣೆಯ ಬಲವು ಚಂದ್ರನನ್ನು ಸ್ವಲ್ಪಮಟ್ಟಿಗೆ ಉಬ್ಬುವಂತೆ ಮಾಡುತ್ತದೆ. ಇದು ಭೂಮಿಗೆ ಎದುರಾಗಿರುವ ಭಾಗದಲ್ಲಿ ಉಬ್ಬರವಿಳಿತದ ಉಬ್ಬುವಿಕೆಯನ್ನು ಸೃಷ್ಟಿಸುತ್ತದೆ. ಈ ಉಬ್ಬರವಿಳಿತದ ಉಬ್ಬು ಗುರುತ್ವಾಕರ್ಷಣೆಯ ಬಲವನ್ನು ಸೃಷ್ಟಿಸುತ್ತದೆ. ಅದು ಭೂಮಿಯ ಸುತ್ತ ತನ್ನ ಕಕ್ಷೆಯ ಅವಧಿಗೆ ಹೊಂದಿಕೆಯಾಗುವವರೆಗೆ ಚಂದ್ರನ ತಿರುಗುವಿಕೆಯನ್ನು ನಿಧಾನಗೊಳಿಸುತ್ತದೆ.

ನಾವು ಭೂಮಿಯಿಂದ ಚಂದ್ರನ ಒಂದು ಬದಿಯನ್ನು ಮಾತ್ರ ನೋಡಬಹುದಾದರೂ, ಚಂದ್ರಗ್ರಹಣದ ಸಮಯದಲ್ಲಿ ಅಥವಾ ಬಾಹ್ಯಾಕಾಶದಿಂದ ನೋಡುವಾಗ ಕೆಲವು ಹಂತಗಳಲ್ಲಿ ನಾವು ಚಂದ್ರನ ಇನ್ನೊಂದು ಭಾಗದ ಒಂದು ಸಣ್ಣ ಭಾಗವನ್ನು ನೋಡಲು ಸಾಧ್ಯವಾಗುತ್ತದೆ. ಅಪೊಲೊ ಕಾರ್ಯಾಚರಣೆಗಳಲ್ಲಿ ಗಗನಯಾತ್ರಿಗಳು ಚಂದ್ರನ ಇನ್ನೊಂದು ಬದಿಯನ್ನು ನೋಡಲು ಮತ್ತು ಅದರ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಿದೆ. 'ಡಾರ್ಕ್ ಸೈಡ್' ಎಂದು ಕರೆಯಲ್ಪಡುವ ಚಂದ್ರನ ಇನ್ನೊಂದು ಭಾಗವು ಬಾಹ್ಯಾಕಾಶ ನೌಕೆಯ ಕಾರ್ಯಾಚರಣೆಗಳನ್ನು ಹೊರತುಪಡಿಸಿ ಭೂಮಿಯಿಂದ ಎಂದಿಗೂ ಗೋಚರಿಸುವುದಿಲ್ಲ.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ನಮ್ಮ ದೇಹದಲ್ಲಿರುವ ಚಕ್ರಗಳು ಮತ್ತು ಅವುಗಳ ಕಾರ್ಯ ನಿರ್ವಹಣೆ

ಸಾಧಾರಣವಾಗಿ ಯೋಗ, ಧ್ಯಾನ ಮತ್ತು ರೇಖಿ ತರಗತಿಗಳಲ್ಲಿ ನಾವು ಚಕ್ರಗಳ ಕುರಿತು ಗುರುಗಳು, ತರಬೇತುದಾರರು ಹೇಳುವುದನ್ನು ಕೇಳಿರುತ್ತೇವೆ.

ಏನೀ ಚಕ್ರಗಳು? ನಮ್ಮ ದೇಹದ ವಿವಿಧ ಭಾಗಗಳಲ್ಲಿ ಇರುವ ವೃತ್ತಾಕಾರದ ಆಕೃತಿಗಳನ್ನು ಚಕ್ರ ಎಂದು ಹೇಳುತ್ತೇವೆ. ಈ ಚಕ್ರಗಳು ದೇಹದ ಆಯಾ ಭಾಗದ ನರವ್ಯೂಹಗಳಿಗೆ ಮತ್ತು ದೇಹದ ಅಂಗಗಳಿಗೆ ಸಂಪರ್ಕವನ್ನು ಹೊಂದಿದ್ದು ಅವು ಸರಿಯಾಗಿ ಕಾರ್ಯನಿರ್ವಹಿಸಲು ತಮ್ಮ ಅಹರ್ನಿಶಿ ಪಾಲನ್ನು ಸಲ್ಲಿಸುತ್ತವೆ. ಚಕ್ರಗಳ ಸರಿಯಾದ ಕಾರ್ಯನಿರ್ವಹಣೆಗೆ ಅವುಗಳು ಸದಾ ತೆರೆದ ಇಲ್ಲವೇ ಸಮತೋಲನ ಸ್ಥಿತಿಯಲ್ಲಿ ಇರಬೇಕು. ಚಕ್ರಗಳು ಮುಚ್ಚಿದ ಸ್ಥಿತಿಯಲ್ಲಿದ್ದರೆ ದೇಹವು ವಿವಿಧ ರೀತಿಯ ಮನೋ ದೈಹಿಕ ತೊಂದರೆಗಳನ್ನು ಅನುಭವಿಸುತ್ತದೆ.

ನಮ್ಮ ದೇಹದಲ್ಲಿ ಒಟ್ಟು 114 ಚಕ್ರಗಳನ್ನು ಗುರುತಿಸಿದ್ದು ಮುಖ್ಯವಾದ ಏಳು ಚಕ್ರಗಳು ನಮ್ಮ ಬೆನ್ನುಹುರಿಯ ತಳ ಭಾಗದಿಂದ ಹಿಡಿದು ನಡು ನೆತ್ತಿಯವರೆಗೆ ಒಂದೇ ಸರಳರೇಖೆಯಲ್ಲಿ ಇರುವ ಏಳು ಚಕ್ರಗಳನ್ನು ಮುಖ್ಯ ಚಕ್ರಗಳೆಂದು ಗುರುತಿಸಲಾಗಿದೆ.

ಮೂಲಾಧಾರ ಚಕ್ರ....ಚಕ್ರಗಳಲ್ಲಿ ಮೊದಲನೆಯದು ಮೂಲಾಧಾರ ಚಕ್ರ.ಇದು ನಮ್ಮ ಬೆನ್ನು ಹುರಿಯ ತಳಭಾಗದಲ್ಲಿ ಇದ್ದು, ದೇಹಕ್ಕೆ ಸಂಪೂರ್ಣ ದೃಢತೆಯನ್ನು ಕೊಡುವ ಚಕ್ರವಾಗಿದೆ.ವ್ಯಕ್ತಿಯ ದೈಹಿಕ ದೃಢತೆಗೆ ಮೂಲವಾದ ಈ ಚಕ್ರ ಮಾನಸಿಕ ದೃಢತೆಯನ್ನು ಕೂಡ ಕಾಯುತ್ತದೆ. ಈ ಚಕ್ರವು ಸುರಕ್ಷತೆ,ಉಳಿವಿಗಾಗಿನ ಹೋರಾಟ ಮತ್ತು ಬದುಕಿನ ಮೂಲ ಆಧಾರದ ಶಕ್ತಿಯ ಕೇಂದ್ರವಾಗಿದೆ. ಈ ಚಕ್ರದ ಶಕ್ತಿಯ ಹರಿವಿನಲ್ಲಿ ತಡೆಯುಂಟಾದರೆ ವ್ಯಕ್ತಿಯು ಖಿನ್ನತೆ ಮತ್ತು ಅಸುರಕ್ಷತೆಗಳಿಂದ ಬಳಲುತ್ತಾನೆ.

ಮೂಲಾಧಾರ ಚಕ್ರವು ದೈಹಿಕ ಶಕ್ತಿ ಮತ್ತು ಮಾನಸಿಕ ಸಂತುಲನದ ಶಕ್ತಿಯ ಹರಿವನ್ನು ಹೊಂದಿರುವುದರಿಂದ,ಮೂಲಾಧಾರ ಚಕ್ರವನ್ನು ಜಾಗೃತಗೊಳಿಸಲು ಮಲಾಸನವನ್ನು ಮಾಡಬೇಕು.

ಸ್ವಾಧಿಷ್ಟಾನ ಚಕ್ರ... ಎರಡನೆಯ ಚಕ್ರವಾದ ಸ್ವಾದಿಷ್ಟಾನ ಚಕ್ರವು ಹೊಕ್ಕುಳಿನ ಕೆಳಭಾಗದಲ್ಲಿದೆ. ಈ ಚಕ್ರವು ದೇಹದ ಲೈಂಗಿಕ ಆಸೆ, ಆಕಾಂಕ್ಷೆಗಳು ಮತ್ತು ಕ್ರಿಯಾಶೀಲತೆಯ ಹರಿವನ್ನು ಹೊಂದಿದೆ. ವ್ಯಕ್ತಿಯ ವೈಯುಕ್ತಿಕ ಮತ್ತು ಇತರರೊಂದಿಗಿನ ಭಾವನಾತ್ಮಕ ವರ್ತನೆ ಮತ್ತು ಸಂಬಂಧಗಳ ಕುರಿತ ಶಕ್ತಿ ಕೇಂದ್ರ ಈ ಚಕ್ರವಾಗಿದೆ. ಸ್ವಾಧಿಷ್ಟಾನ ಚಕ್ರವು ನಿಮ್ಮ ದೇಹ ಮತ್ತು ಮನಸ್ಸುಗಳ ಸಮ್ಮಿಳನಕ್ಕೆ ಕಾರಣವಾಗುವ ಶಕ್ತಿಯನ್ನು ಹೊಂದಿರುವು ದರಿಂದ, ನಿಮ್ಮೊಂದಿಗೆ ನೀವು ಹೆಚ್ಚು ಅರಿಯಲು ಈ ಚಕ್ರದ ಕ್ರಿಯಾಶೀಲತೆಗೆ ಅಂಜನಿ ಆಸನವನ್ನು ಅಭ್ಯಸಿಸಬೇಕು.




ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಮಣಿಪೂರ ಚಕ್ರ... ಇದು ನಮ್ಮ ಹೊಟ್ಟೆಯ ಭಾಗದಲ್ಲಿ ಇದ್ದು, ದೈಹಿಕವಾಗಿ ಜಠರಕ್ಕೆ ಸಂಬಂಧ ಪಟ್ಟ ಕಾರ್ಯಗಳನ್ನುನಿರ್ವಹಿಸಲು ಅನುಕೂಲಕರವಾಗಿದ್ದು,ಮಾನಸಿಕವಾಗಿ ಆತ್ಮವಿಶ್ವಾಸ ಮತ್ತು ಆತ್ಮತೃಪ್ತಿಯ ಶಕ್ತಿ ಕೇಂದ್ರವಾಗಿದೆ. ನಮ್ಮ ದೇಹ ಮತ್ತು ಮನಸ್ಸಿನ ಮೇಲೆ ನಿಯಂತ್ರಣವನ್ನುಹೊಂದಲು ಮಣಿಪುರ ಚಕ್ರವು ಸಹಾಯಕಾರಿಯಾಗಿದೆ. ಮಣಿಪುರ ಚಕ್ರವು ನಿಮ್ಮ ಯೋಜನೆಗಳು ಮತ್ತು ಚಿಂತನೆಗಳನ್ನು ಕಾರ್ಯರೂಪಕ್ಕೆ ತರಲು ಸಹಾಯ ಮಾಡುತ್ತದೆ. ಮಣಿಪೂರ ಚಕ್ರದ ಶಕ್ತಿಯ ಹರಿವನ್ನು ಉದ್ದೀಪಿಸಲು ನಾವಾಸನವನ್ನು ಅಭ್ಯಸಿಸಬೇಕು.

ಅನಾಹತ ಚಕ್ರ.... ಈ ಚಕ್ರವು ನಮ್ಮ ಹೃದಯದ ಭಾಗದಲ್ಲಿ ಸ್ಥಿತವಾಗಿದ್ದು ಹೃದಯಕ್ಕೆ ಸಂಬಂಧಪಟ್ಟ ಎಲ್ಲ ಶಕ್ತಿಯ ಹರಿವಿಗೆ



ಕಾರಣವಾದ ಚಕ್ರವಾಗಿದೆ. ಹೃದಯದ ಆರೋಗ್ಯವನ್ನು ಕಾಯ್ದುಕೊಳ್ಳುವ ಈ ಚಕ್ರವು ಮಾನಸಿಕವಾಗಿ ನಮ್ಮ ಪ್ರೀತಿ ಮತ್ತು ಸಹಾನುಭೂತಿಯ ಶಕ್ತಿಯ ಹರಿವಿನ ಚಕ್ರವಾಗಿದೆ.ಆದ್ದರಿಂದಲೇ ಹೃದಯವನ್ನು ಪ್ರೀತಿಯ ಸಂಕೇತವಾಗಿ ಬಳಸುತ್ತಾರೆ.

ಅನಾಹತ ಚಕ್ರವು ನಿಮ್ಮ ಪ್ರೀತಿಯ ಶಕ್ತಿಯನ್ನು ಮತ್ತು ನೀವು ಬೇರೆಯವರೊಂದಿಗೆ ಹಂಚಿಕೊಳ್ಳುವ ಭಾವ ಬಂಧದ ಶಕ್ತಿಯನ್ನು ಹೊಂದಿದೆ.ಎಲ್ಲರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಲು ಉಷ್ಟ್ರಾಸನವನ್ನು ಅಭ್ಯಸಿಸಿ.

ವಿಶುದ್ಧ ಚಕ್ರ... ಈ ಚಕ್ರವು ನಮ್ಮ ಗಂಟಲಿನ ಭಾಗದಲ್ಲಿ ಸ್ಥಿತವಾಗಿದ್ದು ನಮ್ಮ ಗಂಟಲಿನ ಸುತ್ತಣ ಅಂಗಗಳ ಕಾರ್ಯವೈಖರಿಗೆ ಅನುಕೂಲಕರವಾದ ಶಕ್ತಿಯ ಹರಿವಿಗೆ ಕಾರಣವಾದ ಚಕ್ರವಾಗಿದೆ. ನಮ್ಮ ಧ್ವನಿ ಪೆಟ್ಟಿಗೆಯ ಮೂಲಕ ಮಾತಿನ ಸಂವಹನದ ಕಾರ್ಯನಿರ್ವಹಣೆ ಈ ಚಕ್ರದ ಶಕ್ತಿಯ ಕಾರಣದಿಂದಲೇ. ಗಂಟಲಿಗೆ ಸಂಬಂಧಪಟ್ಟ ಎಲ್ಲಾ ತೊಂದರೆಗಳಿಗೆ ಕಾರಣವಾಗುವುದು ವಿಶುದ್ಧಿ ಚಕ್ರದ ಶಕ್ತಿಯ ಹರಿವಿನ ತೊಂದರೆಯಿಂದ. ನಿಮ್ಮ ಭಾವನೆಗಳನ್ನು ಅದೆಷ್ಟು ಪರಿಣಾಮಕಾರಿಯಾಗಿ ನೀವು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುತ್ತೀರಿ ಎಂಬುದು ವಿಶುದ್ಧಿ ಚಕ್ರದ ಶಕ್ತಿಯ ಹರಿವು ನಿರ್ಧರಿಸುತ್ತದೆ. ನಿಮ್ಮ ಧ್ವನಿ ಈ ಜಗತ್ತಿನಲ್ಲಿ ಕೇಳಿಸುವಂತೆ ಮಾಡಲು ವಿಶುದ್ಧಿ ಚಕ್ರವನ್ನು ಹೆಚ್ಚು ಕ್ರಿಯಾಶೀಲವಾಗಿಸಲು ಸೇತುಬಂಧ ಆಸನದ ಅಭ್ಯಾಸ ಅವಶ್ಯಕವಾಗಿ ಮಾಡಬೇಕು.

ಆಜ್ಞಾ ಚಕ್ರ.... ಈ ಚಕ್ರವು ನಮ್ಮ ಎರಡು ಹುಬ್ಬುಗಳ ಮಧ್ಯ ಭಾಗವಾದ ಹಣೆಯಲ್ಲಿ ಸ್ಥಿತವಾಗಿದೆ. ಈ ಚಕ್ರವು ನಮ್ಮ ಮಾನಸಿಕ ದೃಢತೆ, ವೃತ್ತಿ ಪ್ರವೃತ್ತಿಗಳು, ಅಂತಃ ಪ್ರಜ್ಞೆ ಮತ್ತು ಕಲ್ಪನಾ ಶಕ್ತಿಯ ಹರಿವನ್ನು ಹೊಂದಿದೆ. ಆಜ್ಞಾ ಚಕ್ರದ ಶಕ್ತಿಯ ಕೊರತೆಯಿಂದ ಬಳಲುವವರು ಮಂದ ಬುದ್ಧಿ,ಚಂಚಲ ಚಿತ್ರ ಹೊಯ್ದಾಡುವ ಮನಸ್ಥಿತಿಗಳನ್ನು ಹೊಂದಿರುತ್ತಾರೆ.

ನಮ್ಮ ಮನೋದೈಹಿಕ ವಿಷಯಗಳ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳುವ ಶಕ್ತಿ ಈ ಚಕ್ರದ ಶಕ್ತಿಯ ಹರಿವಿಗೆ ಇದೆ. ಹೆಚ್ಚಿನ ಅಂತಃಶಕ್ತಿಯನ್ನು ಮತ್ತು ಜ್ಞಾನವನ್ನು ಗಳಿಸಲು ಈ ಚಕ್ರವು ಸಹಾಯಕವಾಗಿದ್ದು ಎರಡು ಹುಬ್ಬಗಳ ನಡುವಣ ಹಣೆಯ ಭಾಗದಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಿ ಮೂರನೇ ಕಣ್ಣಿನ ನಿರೀಕ್ಷಣೆಯ ಅಭ್ಯಾಸ ಮಾಡಬೇಕು.

ಸಹಸ್ರಾರ ಚಕ್ರ... ಈ ಚಕ್ರವು ನಮ್ಮ ನಡು ನೆತ್ತಿಯ ಮೇಲೆ ಇದ್ದು ಮನುಷ್ಯನ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಪಟ್ಟ, ಪಾರಮಾರ್ಥಿಕ ವಿಷಯಗಳ ಕುರಿತ ಶಕ್ತಿಯ ಹರಿವನ್ನು ಹೊಂದಿದೆ. ಓರ್ವ ವ್ಯಕ್ತಿಯು ವೈಯಕ್ತಿಕವಾಗಿ ಸಾಮಾಜಿಕವಾಗಿ ಮತ್ತು ಪಾರಮಾರ್ಥಿಕವಾಗಿ ಹೊಂದಿರುವ ಆಧ್ಯಾತ್ಮಿಕ ಸಂಬಂಧವನ್ನು ಈ ಚಕ್ರವು ನಿರ್ಧರಿಸುತ್ತದೆ. ಈ ಚಕ್ರದ ಶಕ್ತಿಯ ಹರಿವಿನಲ್ಲಿ ಅಡೆತಡೆ ಉಂಟಾದರೆ ವ್ಯಕ್ತಿಯು ಮಾನಸಿಕ ತೊಂದರೆ ಮತ್ತು ಅಶಾಂತಿಯಿಂದ ಬಳಲುತ್ತಾನೆ. ವ್ಯಕ್ತಿಯು ತನ್ನ ಮೆದುಳಿನ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಮತ್ತು ಆಧ್ಯಾತ್ಮದ ಅರಿವನ್ನು ಪಡೆಯಲು ಸಹಸ್ರಾರ ಚಕ್ರವನ್ನು ಉದ್ದೀಪಿಸಲು ಶೀರ್ಷಾಸನವನ್ನು ಅಭ್ಯಾಸ ಮಾಡಬೇಕು.

ಚಕ್ರಗಳ ಸಮತೋಲನದಿಂದ ವ್ಯಕ್ತಿಯ ಮನೋ ದೈಹಿಕ ಆರೋಗ್ಯ ಸುಧಾರಿಸಲು ಸಾಧ್ಯ ಎಂಬುದನ್ನು ಮನಗಂಡು ಚಕ್ರಗಳ ಸುಗಮ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ನಮ್ಮನ್ನು ನಾವು ಪ್ರೇರೇಪಿಸೋಣ.

# ಲಾರ್ವಾಹಾರಿ ಮೀನುಗಳ ಬಿಡುಗಡೆ ಕಾರ್ಯಕ್ರಮಕ್ಕೆ ಸಿಇಓ ಚಾಲನೆ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂ ಕಲ್ಯಾಣ ಇಲಾಖೆ, ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ ಇವರ ಸಹಯೋಗದಲ್ಲಿ ಸೊಳ್ಳೆಗಳಿಂದ ಹರಡುವ ರೋಗಗಳ ಜೈವಿಕ ನಿಯಂತ್ರಣದ ಅಂಗವಾಗಿ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾದ ಲಾರ್ವಾಹಾರಿ ಮೀನುಗಳ ಬಿಡುಗಡೆ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು ಹಸಿರು ನಿಶಾನೆ ತೋರಿಸುವುದರ ಮೂಲಕ ಜುಲೈ 5ರಂದು ಚಾಲನೆ ನೀಡಿದರು.

ಈಡಿಸ್ ಲಾರ್ವಾ ಸಮೀಕ್ಷೆ ಮತ್ತು ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆಗಾಗಿ ಪ್ರತಿ ಶುಕ್ರವಾರ ಡೆಂಗಿ ನಿಯಂತ್ರಣ ಅಭಿಯಾನದಡಿ ಜಿಲ್ಲಾಡಳಿತ ಭವನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈಡಿಸ್ ಲಾರ್ವಾ ಸಮೀಕ್ಷೆ ಮತ್ತು ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆಗಾಗಿ ಪ್ರತಿ ಶುಕ್ರವಾರ ಡೆಂಗಿ ನಿಯಂತ್ರಣ ಅಭಿಯಾನದಡಿ ನೀರಿನ ತೊಟ್ಟಿಯಲ್ಲಿ ಲಾರ್ವಾಹಾರಿ ಮೀನುಗಳ ಬಿಡುಗಡೆ ಮಾಡಲಾಯಿತು.

ಇದೇ ವೇಳೆ ಮಾತನಾಡಿದ ಸಿಇಓ ಅವರು, ಡೆಂಗಿ ಜ್ವರ ನಿಯಂತ್ರಣ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ರಾಜ್ಯ ಸರ್ಕಾರವು ಆರೋಗ್ಯ ಇಲಾಖೆ ಮೂಲಕ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಹಿನ್ನೆಲೆಯಲ್ಲಿ ವಾರಕ್ಕೆ ಒಂದು ದಿನ ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶ ಮಾಡಲು ಪ್ರತಿ ಶುಕ್ರವಾರ ಅಭಿಯಾನವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಿ ಡೆಂಗಿ ಜ್ವರ ನಿಯಂತ್ರಣಕ್ಕೆ ಎಲ್ಲರೂ ಕೈಜೋಡಿಸಬೇಕು ಹಾಗೂ ಈ ಬಗ್ಗೆ ಸಾರ್ವಜನಿಕರಿಗೆ ಸೂಕ್ತ ಅರಿವು ಮೂಡಿಸಬೇಕು ಎಂದು ಹೇಳಿದರು.




ಜಿಲ್ಲಾ ಆರೋಗ್ಯ ಮತ್ತು ಕುಟಂಬ ಕಲ್ಯಾಣಾಧಿಕಾರಿಗಳಾದ ಡಾ ಟಿ.ಲಿಂಗರಾಜು ಅವರು ಮಾತನಾಡಿ, ಡೆಂಗಿ ಜ್ವರಕ್ಕೆ ಪ್ರಮುಖ ಕಾರಣವಾದ ಈಡಿಸ್ ಸೊಳ್ಳೆಗಳ ನಿಯಂತ್ರಣಕ್ಕಾಗಿ ಜಿಲ್ಲೆಯಲ್ಲಿರುವ ದೊಡ್ಡ ದೋಣಿಗಳು, ಕಲ್ಲು ಕ್ವಾರಿಗಳು, ಹೊಂಡಗಳು ಮತ್ತು ಮಳೆ ನೀರು ಸಂಗ್ರಹವಾಗುವ ಇತರ ಸ್ಥಳಗಳಲ್ಲಿ ಲಾರ್ವಾಹಾರಿ ಮೀನುಗಳನ್ನು ಬಿಡಲಾಗುತ್ತಿದೆ. ಈ ಲಾರ್ವಾಹಾರಿ ಮೀನುಗಳು ಈಡಿಸ್ ಸೊಳ್ಳೆಗಳ ಮೊಟ್ಟೆಗಳನ್ನು ತಿಂದು ಅವುಗಳ ಸಂತಾನೋತ್ಪತ್ತಿಯನ್ನು ನಾಶ ಮಾಡುತ್ತವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ.ಪ್ರಕಾಶ ವಿ., ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ರವಿಂದ್ರನಾಥಎಂ.ಹೆಚ್.,ಜಿಲ್ಲಾಸರ್ವೇಕ್ಷಣಾಧಿಕಾರಿಗಳಾದ ಡಾ.ನಂದಕುಮಾರ, ಕೊಪ್ಪಳ ತಾಲ್ಲೂಕಾ ಆರೋಗ್ಯಾಧಿ ಕಾರಿಗಳಾದ ಡಾ.ರಾಮಾಂಜನೇಯ, ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿಗಳಾದ ಶಿವಾನಂದ ವಿ ಪೂಜಾರ, ಜಿಲ್ಲಾ ಎನ್.ವಿ.ಬಿ.ಡಿ.ಸಿ.ಪಿ ಕಾರ್ಯಕ್ರಮ ಸಲಹೆಗರರಾದ ರಮೇಶ್ ಸೇರಿದಂತೆ ತಾಲ್ಲೂಕಿನ ಆರೋಗ್ಯ ನಿರೀಕ್ಷಣಾಧಿ ಕಾರಿಗಳು, ಪ್ರಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಡೆಂಗಿ ಜ್ವರ ಪತ್ತೆ ಪರಿಕ್ಷೆಗಾಗಿ ದರಗಳ ಪರಿಷ್ಕರಣೆ: ಡಾ ಟಿ.ಲಿಂಗರಾಜು

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲೆಯಲ್ಲಿ ಡೆಂಗಿ ಜ್ವರ ಪತ್ತೆ ಹಚ್ಚುವ ಪರಿಕ್ಷೆಗಳಾದ ಇ.ಎಲ್.ಐ.ಎಸ್.ಎ ಹಾಗೂ ರ್‍ಯಾಪಿಡ್ ಟೆಸ್ಟ್‌ಗಳ ದರವನ್ನು ಮರುನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟಂಬ ಕಲ್ಯಾಣಾಧಿಕಾರಿಗಳಾದ ಡಾ ಟಿ.ಲಿಂಗರಾಜು ಅವರು ತಿಳಿಸಿದ್ದಾರೆ. ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ರಾಜ್ಯದಲ್ಲಿ ಡೆಂಗಿ ಜ್ವರ ಪತ್ತೆ ಹಚ್ಚುವ ಇ.ಎಲ್.ಐ.ಎಸ್.ಎ (ELISA) ಹಾಗೂ ರ್‍ಯಾಪಿಡ್ ಟೆಸ್ಟ್ (Rapid Test)ಗಳ ದರವನ್ನು ಪರಿಷ್ಕರಿಸಿ ಮರು ನಿಗದಿಗೊಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಖಾಸಗಿ ಟೆಸ್ಟಿಂಗ್ ಲ್ಯಾಬ್‌ಗಳಿಗೆ ಡೆಂಗಿ ಜ್ವರ ಪತ್ತೆ ಹಚ್ಚುವ ಇ.ಎಲ್.ಐ.ಎಸ್.ಎ ಎನ್‌ಎಸ್1 ಪರೀಕ್ಷೆಗೆ ರೂ.300, ಇ.ಎಲ್.ಐ.ಎಸ್.ಎ ಐಜಿಎಂ ಪರೀಕ್ಷೆಗೆ ರೂ.300 ಹಾಗೂ ಸ್ಕ್ರೀನಿಂಗ್ ಟೆಸ್ಟ್: ರ್‍ಯಾಪಿಡ್ ಕಾರ್ಡ್ ಟೆಸ್ಟ್ ಫಾರ್ ಎನ್‌ಎಸ್1 ಐಜಿಎಂ & ಐಜಿಜಿ ಪರೀಕ್ಷೆಗಳಿಗೆ ರೂ. 250 ದರಗಳನ್ನು ಮರುನಿಗದಿಗೊಳಿಸಿದೆ. ಈ ಆದೇಶವನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ 2020, ಸೆಕ್ಷನ್ 4(1) & 4(2) ಕೆ ಅಡಿಯಲ್ಲಿ ಹೊರಡಿಸ ಲಾಗಿರುತ್ತದೆ. ಖಾಸಗಿ ಪ್ರಯೋಗಶಾಲೆಗಳು, ಡಯಾಗ್ನೋಸ್ಟಿಕ್ ಲ್ಯಾಬ್‌ಗಳು ಡೆಂಗಿ ಜ್ವರ ಪತ್ತೆ ಹಚ್ಚುವ ಪರೀಕ್ಷೆಯ ಪರಿಷ್ಕೃತ ದರಗಳ ಆದೇಶ ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿದೆ.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ಕವಿ ಮನಸು

### ಬಂಜೆ ಎನ್ನುವ ಮೊದಲು....

ಮಡಿಲನು ತುಂಬಲು ಕುಡಿಯನು
ಬಯಸಿದೆ
ಪಡೆಯದೆ ಹೋದೆನು ಬಾಳಿನೊಳು
ಬಿಡುವರೆ ನೆರೆಹೊರೆ ಕಿಡಿಯನು ಹಚ್ಚುವ
ನುಡಿಗಳು ಕೂತಿವೆ ಮನಸಿನೊಳು

ಬಂಜೆಯು ಎನುವರು ರಂಜನೆ ಅವರಿಗೆ
ಗಂಜಿಯು ಸೇರದು ಗಂಟಲೊಳು
ಅಂಜುತ ಕುಳಿತಿಹ ಪಂಜರ ಪಕ್ಷಿಗೆ
ನಂಜನು ಉಣಿಸುವ ಕೃತ್ಯಗಳು

ತಂದಿಹ ಗಿಡಗಳ ಚೆಂದದಿ ನೆಡುವರು
ಹೊಂದಲು ಪರಿಮಳ ಹೂಗಳನು
ಚೆಂದದ ಹೂಗಳ ಹೊಂದದ ಗಿಡಗಳ
ಮಂದಿಯು ಜರೆವುದು ತರವೇನು?

ಬಂಧುಗಳಾದರು ಕಂದನು ನೀಡರು
ಕುಂದಿಹ ಬಂಜೆಯು ನಾನಂತೆ
ಕಂದನ ಹಡೆಯದ ನೊಂದಿಹ ಮನವನು
ಕೊಂದರು ಜೀವದಲಿರುವಂತೇ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ನನ್ನ ಮೌನ ಬಿಳಿ ಮೋಡದಷ್ಟು

ನನ್ನನ್ನು ಯಾರಾದರು ಕೆಡವಲು ಬಂದರೆ
ಸೂರ್ಯನ ಶಾಖದಷ್ಟೇ ಅವರ
ಶಾಖವನ್ನು ಅವರಿಗೇ ತಟ್ಟಿಸದೆ
ಬಿಡುವುದಿಲ್ಲ ನನ್ನ ಮೌನ

ನನ್ನ ಮೌನ ದೀಪದಷ್ಟು
ನನ್ನನ್ನು ಯಾರಾದರು ಕೆಡವಲು ಬಂದರೆ
ಬೆಂಕಿಯ ಶಾಖದಷ್ಟೇ ಅವರ
ಶಾಖವನ್ನು ಅವರಿಗೇ ತಟ್ಟಿಸದೆ
ಬಿಡುವುದಿಲ್ಲ ನನ್ನ ಮೌನ

ನನ್ನ ಮೌನ ಮಿಂಚಿನಷ್ಟು
ನನ್ನನ್ನು ಯಾರಾದರು ಕೆಡವಲು ಬಂದರೆ
ಸಿಡಿಲಿನ ಶಬ್ದದಷ್ಟೇ ಅವರ
ಕೆಡುಕನ್ನು ಅವರಿಗೇ ತಟ್ಟಿಸದೆ
ಬಿಡುವುದಿಲ್ಲ ನನ್ನ ಮೌನ

– ವಾಸವಿ ಹನುಮೇಶ
ಅಂಜನಳ್ಳಿ, ಕನಕಗಿರಿ

### ಅಜ್ಜಿ

ಫ್ಯಾಶನ್ ಕಾಲದ ಸೊಸೆಯು
ನಾನು. ಹಳೆಯ ಕಾಲದ ಅತ್ತಿ ಐತಿ.
ಕಣ್ಣಿಗೆ ಚೆಸ್ಮ ಹಾಕೈತಿ
ಕೈಯಾಗ ಕೋಲು ಹಿಡದೈತಿ....1

ನೌಕರಿ ಮಗನ ಹಡದೈತಿ
ಬಹಳ ಪುಣ್ಯ ಮಾಡಿತಿ.
ನನ್ನ ಜೀವ ಹಿಂಡುತಾಳ
ಬೇಜಾರ ಬಹಳ ಆಗೈತಿ...2

ಮಜ್ಜಿಗೆ ಸಾರು ಮುದ್ದೆಯ ಗುಂಡು
ಕಟ್ಟಿ ಕೊಡು ಎನ್ನುತ್ತಾಳ.
ಚಪಾತಿ ಅನ್ನ ಮುಂದೆ ಇಟ್ಟರೆ
ಹಿಂದಕ್ಕೆ ತಳ್ಳಿ ಬಿಡುತಾಳ...3
.
ಗಾದಿಯ ಹಾಸಿ ಕೊಟ್ಟರೆ
ಕೌದಿ ಬೇಕು ಅನ್ನುತ್ತಾಳ.
ಕುರ್ಚಿಯ ಮೇಲೆ ಕುಳಿತುಕೋ ಎಂದರೆ
ಚಾಪಿಯ ಮೇಲೆ ಮಲಗುವಳು....4

ಮುಂಜಾನೆದ್ದು ದೇವರ ಗುಡಿಗೆ
ಶಿವ ಶಿವ ಎನ್ನುತ ಹೋಗುವಳು.
ಕಸವನು ಅಂದು ನೀರನ್ನು ಉಗ್ಗಿ
ಗಂಟೆಯ ಬಾರಿಸಿ ಬರುವಳು.....????

– ಎಸ್.ಎಸ್.ಮುದ್ಲಾಪುರ ಕೊಪ್ಪಳ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES VIJAYANAGARA
Follow for vijayanagara dist. updates

# ನೀಟ್ ಅಕ್ರಮ, ವಿದ್ಯಾರ್ಥಿಗಳಿಗೆ ಶಿಕ್ಷಣ ವಂಚಿಸುವ ಹುನ್ನಾರ

## ಎಸ್‌ಎಫ್‌ಐ ಆರೋಪ | ಆಯಾ ರಾಜ್ಯಗಳಿಗೆ ಸ್ವಾಯತ್ತತೆ ಒದಗಿಸಲು ಆಗ್ರಹ



■ ಹಂಪಿ ಟೈಮ್ಸ್ ಹೊಸಪೇಟೆ

ನೆಟ್ ಮರು ಪರೀಕ್ಷೆ ಮತ್ತು ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ದೂರುಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಭಾಧಿತರಾದ್ದಾರೆ. ರಾಷ್ಟೀಯ ಪರೀಕ್ಷಾ ಪ್ರಾಧಿಕಾರ ರಾಷ್ಟ್ರ ಮಟ್ಟದ ಪರೀಕ್ಷೆಗಳನ್ನು ನಡೆಸಲು ಅಸಮರ್ಥತೆಯನ್ನು ಪ್ರದರ್ಶಿಸಿದೆ. ಸರ್ಕಾರಗಳು ಖಾಸಗೀಕರಣಕ್ಕೆ ಆದ್ಯತೆ ನೀಡಿ, ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದೆ ಎಂದು ಆರೋಪಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಜಿಲ್ಲಾ ಘಟಕ ಗುರುವಾರ ತಾಲೂಕು ಕಚೇರಿ ಎದುರ ಪ್ರತಿಭಟನೆ ನಡೆಸಿತು.

ಕೋಚಿಂಗ್ ಸೆಂಟರ್‌ಗಳ ಪ್ರೋತ್ಸಾಹಿಸುವಿಕೆಯನ್ನು ಸಿಯುಇಟಿ, ನೀಟ್ ನಂತಹ ಕೇಂದ್ರೀಕೃತ ಪರೀಕ್ಷೆಗಳ ಪಾಲಿಸಿಗಳಿಂದ ಶಿಕ್ಷಣದ ಖಾಸಗೀಕರಣ ಹೆಚ್ಚುತ್ತಿದೆ. ಕೋಟ್ಯಾಂತರ ತಳ ಸಮುದಾಯದ ಹಾಗೂ ಮಾಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣ ದುಬಾರಿಯಾಗಿದೆ. ಒಂದು ರಾಷ್ಟ್ರ ಒಂದು ಪರೀಕ್ಷೆ ಎಂಬ ಘೋಷಣೆಯ ಅಡಿಯಲ್ಲಿ, ಇಡೀ ಪರೀಕ್ಷಾ ವ್ಯವಸ್ಥೆಯು ಕುಸಿದಿದೆ. ಲಕ್ಷಾಂತರ ವಿದ್ಯಾರ್ಥಿಗಳ ಅಮೂಲ್ಯ ಸಮಯ, ಶ್ರಮ ಮತ್ತು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ವ್ಯರ್ಥ ಮಾಡುತ್ತಿದೆ. ವಿದ್ಯಾರ್ಥಿಗಳ ಬಗ್ಗೆ ತೋರುವ ನೀದಾರ್ಕ್ಷಿಣ್ಯ ನಿರ್ಲಕ್ಷ್ಯವು ಅಕ್ರಮಗಳ ಬಗ್ಗೆ ಪಾರದರ್ಶಕತೆ, ನಿಷ್ಪಕ್ಷಪಾತ ತನಿಖೆಗೆ ನಡೆಯಲಿ ಎಂದು ಸಮಿತಿ ಸದಸ್ಯರು ಆಗ್ರಹಿಸಿದರು.

2018–19 ಮತ್ತು 2021–22ರ ನಡುವೆ ಭಾರತದಲ್ಲಿ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ 61885ರಷ್ಟು ಕಡಿಮೆಯಾಗಿವೆ. ಒಟ್ಟು 15,51,000 ಶಾಲೆಗಳಿಂದ 14,89,115 ಶಾಲೆಗಳಿಗೆ ಕುಸಿದಿದೆ. ಒಟ್ಟು 61361 ಶಾಲೆಗಳನ್ನು ಮುಚ್ಚಲಾಗಿದೆ. ಸರ್ಕಾರಿ ಶಾಲೆಗಳ ಸಂಖ್ಯೆಯಲ್ಲಿ ವಿಪರೀತ ಕುಸಿತ ಹಾಗೂ ಖಾಸಗಿ ಶಾಲೆಗಳ ಸಂಖ್ಯೆಯಲ್ಲಿ ಅಗಾಧ ಪ್ರಮಾಣದಲ್ಲಿ ಹೆಚ್ಚಳವಾಗಿರುವುದು ಬಡ–ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣದಿಂದ ವಂಚಿಸುವ ಹುನ್ನಾರವಾಗಿದೆ. ಅತಿಯಾದ ಖಾಸಗೀಕರಣದಿಂದ ವಿದ್ಯಾರ್ಥಿಗಳು ಶುಲ್ಕವನ್ನು ಭರಿಸಲು ಸಾಧ್ಯವಾಗದೇ ಶಿಕ್ಷಣದಿಂದ ದೂರ ಉಳಿಯುತ್ತಾರೆ. ಶಿಕ್ಷಣ ಮತ್ತು ಪ್ರಜಾಪ್ರಭುತ್ವದ ಮೇಲಿನ ನಿರಂತರ ದಾಳಿಯನ್ನು ಎಸ್‌ಎಫ್‌ಐ ವಿರೋಧಿಸುತ್ತದೆ. ಎನ್‌ಟಿಎ ಯನ್ನು ರದ್ದುಗೊಳಿಸಬೇಕು. ಮತ್ತು ಕೇಂದ್ರದ ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು., ಇತ್ತೀಚಿಗೆ ನೆಟ್ ಮತ್ತು ನೀಟ್ ಪರೀಕ್ಷೆಯನ್ನು ಬರೆದ ವಿದ್ಯಾರ್ಥಿಗಳಿಗೆ ಪರಿಹಾರವನ್ನು ಒದಗಿಸಬೇಕು. ಪಿಎಚ್ಡಿ ಪ್ರವೇಶಾತಿ ಪರೀಕ್ಷೆಗೆ ನೆಟ್ ಪರೀಕ್ಷೆ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು ಎನ್ನುವ ನಿಯಮವನ್ನು ವಾಪಸ್ಸು ಪಡೆಯಬೇಕು. ಪರೀಕ್ಷೆಗಳನ್ನು ಕೇಂದ್ರೀಕರಣ ಗೊಳಿಸುವುದನ್ನು ನಿಲ್ಲಿಸಬೇಕು. ಆಯಾ ರಾಜ್ಯಗಳಿಗೆ ಸ್ವಾಯತ್ತತೆಯನ್ನು ಒದಗಿಸಬೇಕು. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಯುವ ದಾಳಿಗಳನ್ನು ನಿಲ್ಲಿಸಬೇಕು ಹಾಗೂ ವಿದ್ಯಾರ್ಥಿಗಳ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಕಾಪಾಡಬೇಕು. ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಿ, ಸರ್ಕಾರಿ ಶಾಲೆಗಳನ್ನು ಮುಚ್ಚುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು. ವಿಜಯನಗರ ಜಿಲ್ಲಾ ಉಪಾಧ್ಯಕ್ಷ ಕೆ.ಎ.ಪವನ್‌ಕುಮಾರ್, ರಾಜ್ಯಸಮಿತಿ ಮುಖಂಡ ಶಿವಾರೆಡ್ಡಿ, ತಾಲೂಕು ಸಮಿತಿಯ ಲೋಕೇಶ, ಸುಧಾಕರ, ಲಕ್ಷ್ಮೀ, ರೂಪ, ಪೂಜಾ, ಏಕಲವ್ಯ, ವಿಶ್ವ ಇತರರಿದ್ದರು.

# ಜು.06ಕ್ಕೆ ವಿವಿಧ ಪರಿಕರಗಳ ವಿತರಣೆ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಹಿರಿಯ ನಾಗರಿಕರ ಹಾಗೂ ವಿಕಲಚೇತನರ ಸಬಲೀಕರಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆಯಡಿ ಅಂಗನವಾಡಿ ಕೇಂದ್ರಗಳಿಗೆ ರೆಫ್ರಿಜರೇಟರ್ ಹಾಗೂ ವಿಕಲಚೇತನರ ತ್ರಿಚಕ್ರ ವಾಹನಗಳು ಮತ್ತು ಪೋಷಣ್ ಅಭಿಯಾನ ಯೋಜನೆಯಡಿ ಸ್ಮಾರ್ಟ್‌ಫೋನ್ ಮತ್ತು ವಿವಿಧ ಪರಿಕರಗಳ ವಿತರಣೆ ಕಾರ್ಯಕ್ರಮವನ್ನು ಜುಲೈ 06 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸ್ಟೇಡಿಯಂ ರಸ್ತೆಯ ವಾಲ್ಮೀಕಿ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಅವರು ಘನ ಉಪಸ್ಥಿತಿ ಇರುವರು. ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶಾಸಕ ಜೆ.ಎನ್.ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ಎಂ.ನಾಗರಾಜ, ನಾರಾ ಭರತ್ ರೆಡ್ಡಿ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ವಿಕಲಚೇತನರ ಸಬಲೀಕರಣ ಇಲಾಖೆಯ ಕಾರ್ಯದರ್ಶಿ ಡಾ.ಜೆ.ಸಿ.ಪ್ರಕಾಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಹಿರಿಯ ನಾಗರಿಕರ ಹಾಗೂ ವಿಕಲಚೇತನರ ಸಬಲೀಕರಣ ಇಲಾಖೆಯ ನಿರ್ದೇಶಕ ಎನ್.ಸಿದ್ದೇಶ್ವರ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಉಪಸ್ಥಿತರಿರುವರು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇತಿಹಾಸದ ಮಗ್ಗಲುಗಳ ಅರಿವು ಅಗತ್ಯ

## ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಅಭಿಮತ | ಹಂಪಿ ಇತಿಹಾಸ ಮತ್ತು ಪುರಾತತ್ವ ವಿಶೇಷ ಉಪನ್ಯಾಸ

■ ಹಂಪಿ ಟೈಮ್ಸ್ ಹೊಸಪೇಟೆ

ಮಾನವನ ಜೀವ ವಿಕಸನದಿಂದ, ಸಮಾಜ, ಸಾಮ್ರಾಜ್ಯ ನಿರ್ಮಾಣದವರೆಗೂ ಇತಿಹಾಸವು ಹಲವು ಸ್ಥಿತ್ಯಂತರಗಳನ್ನು ಕಂಡಿದೆ. ಯಾವುದೇ ಪ್ರದೇಶದ ಇತಿಹಾಸವು ಶಾಶ್ವತವಲ್ಲ ಅದು ಅಧ್ಯಯನಗಳಿಂದ ಹೊಸ ಅರ್ಥ ಮತ್ತು ವಿವಿಧ ಮಗ್ಗಲುಗಳಿಗೆ ಬದಲಾಗುತ್ತ ಹೋಗುತ್ತದೆ. ಇತಿಹಾಸದ ಹೊಸ ಮಗ್ಗಲುಗಳನ್ನು ಇಂದಿನ ವಿದ್ಯಾರ್ಥಿಗಳಿಗೆ ತಿಳಿಸುವುದು ಅವಶ್ಯಕವಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಹೇಳಿದರು.



ಕನ್ನಡ ವಿಶ್ವವಿದ್ಯಾಲಯದ ನುಡಿಕಟ್ಟಡದಲ್ಲಿ ಬುಧವಾರ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಹಾಗೂ ಜಮಖಂಡಿಯ ಬಿ.ಎಲ್.ಡಿ.ಇ ಸಂಸ್ಥೆಯ ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವ ವಿಭಾಗ ವಾಣಿಜ್ಯ, ಬಿ.ಎಚ್.ಎಸ್.ಕಲೆ , ಬಿ.ಜಿ.ಪಿ. ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ ಇವರ ಸಂಯುಕ್ತ ಆಶ್ರಯದಲ್ಲಿ ವಿಶೇಷ ಉಪನ್ಯಾಸ ಹಂಪಿ ಇತಿಹಾಸ ಮತ್ತು ಪುರಾತತ್ವ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಇತಿಹಾಸದ ಸಂಶೋಧನೆಯಲ್ಲಿ ಸಿದ್ದಪಡಿಸಿದ ವಿಷಯಗಳು ತೀರ್ಪುಗಳಂತೆ ಸ್ಥಿರವಾಗಿರದೆ ಸಂಶೋಧನೆಯಿಂದ ಹೊಸ ವಿಷಯಗಳಿಂದ ಮಾರ್ಪಾಡನ್ನು ಪಡೆಯುತ್ತವೆ.

>>4

# ಜು.15ಕ್ಕೆ ಪಿಂಚಣಿ ಅದಾಲತ್

■ ಹಂಪಿ ಟೈಮ್ಸ್ ಬಳ್ಳಾರಿ

ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಜು.15 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ಪಿ.ಪಿ.ಒ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪವ ಹಾಗೂ ಇತ್ಯಾದಿಗಳನ್ನು ಜು.10 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೇಂದ್ರ ಗೃಹ ಸಚಿವರ ಮಧ್ಯಸ್ಥಿಕೆಗೆ ಆಗ್ರಹ

## ಪಶ್ಚಿಮ ಬಂಗಾಳದಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ, ಹಲ್ಲೆ ಪ್ರಕರಣ



■ ಹಂಪಿ ಟೈಮ್ಸ್ ಹೊಸಪೇಟೆ

ಪಶ್ಚಿಮ ಬಂಗಾಳದಲ್ಲಿ ಮಹಿಳೆಯರ ಮೇಲಿನ ಅನ್ಯಾಯ ಮತ್ತು ಅಸಂಸ್ಕೃತಿಯ ವರ್ತನೆ ಕುರಿತು ಇಲ್ಲಿನ ಜಾಗೃತಿ ಮಹಿಳಾ ಸಂಘಟನೆಯ ಸದಸ್ಯರು ಕೇಂದ್ರ ಗೃಹ ಸಚಿವರಿಗೆ ಡಿಸಿ ಅವರ ಮೂಲಕ ಪತ್ರ ರವಾನಿಸಿದ್ದಾರೆ. ಪಶ್ಚಿಮ ಬಂಗಾಳದ ಕೂಚ್ ಬೆಹಾರ್ ಮತ್ತು ಉತ್ತರ ದಿನಾಜ್ ಪುರದಲ್ಲಿ (ಚೋಪ್ರಾ) ನಡೆದ ಘಟನೆಯಿಂದ ಮಹಿಳೆಯರೆಲ್ಲರೂ ದುಃಖಿತರಾಗಿದ್ದೇವೆ. ಪಶ್ಚಿಮ ಬಂಗಾಳದಲ್ಲಿ ದಿನದಿಂದ ದಿನಕ್ಕೆ ಮಹಿಳೆಯರ ಸ್ಥಿತಿ ಗಂಭೀರ ಮತ್ತು ಕಳವಳಕಾರಿಯಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ಕೇವಲ ನಿಘಂಟುಗಳಿಗೆ ಸೀಮಿತವಾದಂತಿದೆ. ಕೂಚ್ ಬೆಹಾರ್ ಮತ್ತು ಉತ್ತರ ದಿನಾಜ್ ಪುರ ಘಟನೆಗಳು ಇಡಿ ನಾಗರೀಕ ಸಮಾಜಕ್ಕೆ ನಾಚಿಕೆಗೇಡಿನ ಮತ್ತು ತಲೆತಗ್ಗಿಸುವ ಸಂಗತಿಯಾಗಿದೆ. ಅಮಾಯಕ ನಾಗರಿಕರು ಹಾಗೂ ವಿಶೇಷವಾಗಿ ಮಹಿಳೆಯರ ಶೋಷಣೆ ಮತ್ತು ನೋವಿನ, ಕಿರುಕುಳವು ಅತ್ಯಂತ ಖಂಡನೀಯವಾಗಿದೆ. ಭಾರತೀಯ ಸಂವಿಧಾನ ವನ್ನು ಉಲ್ಲಂಘಿಸುವ ಈ ಘಟನೆಗಳು ತಾಲಿಬಾನ್ ಆಡಳಿತವನ್ನು ಮೆಲಕು ಹಾಕುತ್ತಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಹಿಳೆಯಾಗಿದ್ದರು, ಮಹಿಳೆಯರಿಗೆ ಆಗುತ್ತಿರುವ ಅನ್ಯಾಯ, ಅಪಮಾನ, ದೌರ್ಜನ್ಯ ಪ್ರಕರಣಗಳು, ನಿಲ್ಲುತ್ತಿಲ್ಲ, ಇದರಿಂದ ನಾವೆಲ್ಲರೂ ನೊಂದಿದ್ದೇವೆ, ಈ ಘಟನೆಯನ್ನು ಖಂಡಿಸಿದ್ದೇವೆ, ಕೂಡಲೇ ಈ ವಿಚಾರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಕೂಡಲೇ ಮಧ್ಯಪ್ರವೇಶಿಸಿ,ಅಗತ್ಯ ಕ್ರಮಗಳನ್ನು ಕೈಗೊಂಡು, ಘಟನೆಯ ಕುರಿತು ನ್ಯಾಯಾಂಗ ತನಿಖೆಗೆ ಒಳಪಡಿಸಿ, ಮಹಿಳೆಯರಿಗೆ ಆಗುತ್ತಿರುವ ಅಪಮಾನ, ಅನ್ಯಾಯವನ್ನು ಸರಿಪಡಿಸಬೇಕು, ತಪ್ಪಿತಸ್ಥರು ಯಾರೇ ಇರಲಿ, ಎಷ್ಟೇ ಬಲಿಷ್ಟವಾಗಿರಲಿ ಕಠಿಣ ಕಾನೂನು ಕ್ರಮ ಜರುಗಿಸಬೇಕು, ಸಂತ್ರಸ್ಥ ಮಹಿಳೆಯರಿಗೆ ದೈಹಿಕ ಹಾಗೂ ಮಾನಸಿಕ ಚಿಕಿತ್ಸೆ ಹಾಗೂ ಅವರ ಪುನರ್ವಸತಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಕಾರ್ಯಕರ್ತರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಜಾಗೃತಿ ಮಹಿಳಾ ಸಂಘಟನೆಯ ಜ್ಯೋತಿ ನಾಗರಾಜ್, ಪದ್ಮಜಾ ಆರ್.ಜೋಶಿ, ಕಲಾವತಿ ಗೋಪಾಲಕೃಷ್ಣ, ಜ್ಯೋತಿ ಕುಲಕರ್ಣಿ, ಜಯಶ್ರೀ ಕೆ.ಸೇರಿದಂತೆ ಸುಮಾರು ಜನ ಮಹಿಳಾ ಸದಸ್ಯರು ಇದ್ದರು.

> ಪಶ್ಚಿಮ ಬಂಗಾಳದಲ್ಲಿ ನಡೆದ ಅಮಾನವೀಯ ಘಟನೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಕೂಡಲೇ ಮಧ್ಯಪ್ರವೇಶಿಸಿ,ಅಗತ್ಯ ಕ್ರಮಗಳನ್ನು ಕೈಗೊಂಡು, ನ್ಯಾಯಾಂಗ ತನಿಖೆಗೆ ಒಳಪಡಿಸಿ, ಮಹಿಳೆಯರಿಗೆ ಆಗುತ್ತಿರುವ ಅಪಮಾನ, ಅನ್ಯಾಯವನ್ನು ಸರಿಪಡಿಸಬೇಕು.
>
> – **ಜ್ಯೋತಿ ನಾಗರಾಜ್** ಜಾಗೃತಿ ಮಹಿಳಾ ಸಂಘಟನೆಯ ಮುಖ್ಯಸ್ಥರು ಹೊಸಪೇಟೆ.



ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**06–07–2024 – ಶನಿವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ವ್ಯಾಘಾತ |
| ಕರಣ | : ಕಿಂಸ್ತುಘ್ನ |
| ಸೂರ್ಯೋದಯ | : 05:47:55 |
| ಸೂರ್ಯಾಸ್ತ | : 19:15:34 |
| ರಾಹು | : 09:10–10:51 |
| ಯಮಘಂಡ | : 14:13–15:54 |
| ಗುಳಿಕ | : 05:48–07:29 |

## ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ : 05–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.80 ಅಡಿ |
| ಒಳ ಹರಿವು | 19201 ಕ್ಯುಸೆಕ್ |
| ಹೊರ ಹರಿವು | 295 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.714 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.69 ಅಡಿ |
| ಒಳ ಹರಿವು | 259 ಕ್ಯುಸೆಕ್ |
| ಹೊರ ಹರಿವು | 60 ಕ್ಯುಸೆಕ್ |
| ಸಾಮರ್ಥ್ಯ | 3.071 ಟಿಎಂಸಿ |

ಕ್ಲಾಸಿಫೈಡ್ ಜಾಹೀರಾತು
ಸಂಪರ್ಕಿಸಿ
9448633038

**CHANGE OF NAME**

**RITHVIK KAMPLI S/o RAJESH KAMPLI,** aged about 23 years, R/o 6th cross, Near Nandini Stores, M.J.Nagara Hosapete Tq, Vijayanagara Dist.

I have changed my name From **RITHVIK VENKANNA KAMPLI** to **RITHVIK KAMPLI**

vide affidavit before notary public Chandrashekhar P.Yalgod, Hosapete on dt:28.06.2024

# ಜನರಿಗೆ ಉಚಿತ ಸೌಲಭ್ಯಗಳ ಬದಲಾಗಿ ಶಿಕ್ಷಣಕ್ಕೆ ಒತ್ತುಕೊಡಿ

### ಶಾಸಕ ಕೆ.ನೇಮಿರಾಜ್ ನಾಯ್ಕ್ ಸರ್ಕಾರಕ್ಕೆ ಆಗ್ರಹ । ಶಿಕ್ಷಣದಿಂದ ಬದಲಾವಣೆ ಸಾಧ್ಯ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಮೀಸಲಾತಿ ಕ್ಷೇತ್ರದಲ್ಲಿ ನನ್ನ ಗೆಲುವಿಗೆ ಶ್ರಮಿಸಿದ ಪ್ರತಿಯೊಬ್ಬರ ಹೃದಯ ಸ್ಪರ್ಶಿ ಋಣ ಎನ್ನುವುದು ನನ್ನ ಮೇಲಿದೆ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ಭಾವುಕರಾಗಿ ಮಾತನಾಡಿದರು.

ಪಟ್ಟಣದ ಗಂಗಾವತಿ ಭೀಮಪ್ಪನವರ ಸರ್ಕಾರಿ ಪ.ಪೂ.ಕಾಲೇಜ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಇಲಾಖೆಗಳ ಸರ್ಕಾರಿ ಸೌಲಭ್ಯಗಳನ್ನು ಫಲಾನುಭವಿಗಳಿಗೆ ವಿತರಿಸಿ ಮಾತನಾಡಿದರು. ಕ್ಷೇತ್ರದ ಮತದಾರರು ಮತ ನೀಡುವ ಮೂಲಕ ರಾಜಕೀಯ ಪನರ್ ಜೀವನ ನೀಡಿದವರನ್ನು ನಾನು ಎಂದಿಗೂ ಮರೆಯುವುದಿಲ್ಲ.

ರಾಜ್ಯಕ್ಕೆ ಮಾದರಿಯಾಗುವ ಪಿ–3 ಎನ್ನುವ ಕಾರ್ಯಕ್ರಮದಡಿ ಪೋತಿ, ಪಿಂಚಣಿ ಹಾಗೂ ಪೋಡಿಗಳನ್ನು ಶೀಘ್ರವಾಗಿ ಮಾಡಿಕೊಡಲಾಯಿತು. ಪ್ರಮುಖವಾಗಿ ಸಾರ್ವಜನಿಕರಿಗೆ ಉಚಿತ ಸೌಲಭ್ಯಗಳನ್ನು ನೀಡುವ ಬದಲಾಗಿ ಶಿಕ್ಷಣಕ್ಕೆ ಒತ್ತು ನೀಡಿ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ನೀಡಿದರೆ ಪಾಲಕರಿಗೆ ಅದೇ ದೊಡ್ಡ ಉಪಕಾರವಾಗುತ್ತೆ ಎಂದ ಅವರು, ಶಿಕ್ಷಣಕ್ಕಾಗಿ 15ಕೋಟಿ ರೂ.ಗಳ ವೆಚ್ಚದಲ್ಲಿ ಕಂಪ್ಯೂಟರ್ ಲ್ಯಾಬ್, ಕ್ಷೇತ್ರದ ಆಶಾ ಕಾರ್ಯಕರ್ತೆಯರಿಗೆ ಹೆಲ್ತ್‌ಕಿಟ್‌ಗಳನ್ನು, ಅಂಗನವಾಡಿ ಶಿಕ್ಷಕಿಯರಿಗೆ ಮೊಬೈಲ್‌ಗಳನ್ನು, ಕೈಗಾರಿಕೆ ಇಲಾಖೆಯಡಿ ಮಹಿಳೆಯರಿಗೆ ಹೊಲಿಗೆ ಯಂತ್ರ, ಅಂಗವಿಕಲರಿಗೆ ತ್ರಿಚಕ್ರ ವಾಹನ, ರೈತರಿಗೆ ಕೃಷಿಕ ಸಲಕರಣಿಗಳು ಸೇರಿದಂತೆ ಒಟ್ಟು 23 ಇಲಾಖೆಯಿಂದ 1747 ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸಲಾಗುತ್ತಿದೆ ಎಂದರು. ರಾಜ್ಯಕ್ಕೆ ಮಾದರಿ ಕ್ಷೇತ್ರವನ್ನಾಗಿ ಮಾಡುವಲ್ಲಿ ಶ್ರಮಿಸುವೆ, ನಿಮ್ಮ ಸಲಹೆ ಮತ್ತು ಸಹಕಾರ ಅವಶ್ಯ ಎಂದರು.

ತಹಸೀಲ್ದಾರ್ ಚಂದ್ರಶೇಖರ್ ಶಂಭಣ್ಣ ಗಾಳಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಗಳು, ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

# ಬಳಸಿ ಬೀಸಾಡುವ ವಸ್ತು ತ್ಯಜಿಸಿ, ಪರಿಸರ ಉಳಿಸಿ

### ಪರಿಸರ ಮತ್ತು ವನ್ಯಜೀವಿತಜ್ಞ ಡಾ.ಸಮದ್ ಕೊಟ್ಟೂರು ಹೇಳಿಕೆ । ಮನಮಹೋತ್ಸವ ವಿಶ್ವಪರಿಸರ ದಿನಾಚರಣೆ

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಕೈಗಾರಿಕೆಗಳ ಕ್ರಾಂತಿಯಾದಂತೆಯೇ ಪರಿಸರದ ಮೇಲೆ ಗದಾ ಪ್ರಹಾರ ಆರಂಭವಾಗಿದೆ. ಇಂದು ಜಗತ್ತಿನಲ್ಲಿ ಶೇ.21ರಷ್ಟು ಮಾತ್ರ ಅರಣ್ಯ ಉಳಿದಿದೆ ಎಂದು ಪರಿಸರ ಮತ್ತು ವನ್ಯಜೀವಿತಜ್ಞ ಡಾ.ಸಮದ್ ಕೊಟ್ಟೂರು ಹೇಳಿದರು.

ಪಟ್ಟಣದ ಜಿ.ಟಿ.ಟಿ.ಸಿ. ಕಾಲೇಜಿನಲ್ಲಿ, ಸಮೀಪದ ನಾರಾಯಣದೇವರ ಕೆರೆಯ ಎಸ್.ಎಲ್.ಆರ್.ಮೆಟಾಲಿಕ್ಸ್ ಕಂಪನಿಯು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವಿಜಯನಗ ಪ್ರದೇಶಿಕ ಕಚೇರಿ, ಶಾಲಾ ಶಿಕ್ಷಣ ಇಲಾಖೆ ಯೊಂದಿಗೆ ಹಮ್ಮಿಕೊಂಡ, ವನ ಮಹೋತ್ಸವ, ವಿಶ್ವಪರಿಸರ ದಿನಾಚರಣೆಯಲ್ಲಿ ಮಾತನಾಡಿದರು.

ಪರಿಸರಕ್ಕೆ ಧಾರ್ಮಿಕ ಭೇದಗಳಿಲ್ಲ, ನಾವುಗಳು ಧಾರ್ಮಿಕ ಆಚರಣೆಗಳ ನೆಪದಲ್ಲಿ ಪರಿಸರವನ್ನು ಹಾಳು ಮಾಡುತ್ತಿದ್ದೇವೆ. ದೈವಿಸ್ವರೂಪದ ಗಂಗೆಯನ್ನು ಪೂಜಿಸುತ್ತೇವೆ, ನಾವೇ ಮಲೀನಗೊಳಿಸುತ್ತೇವೆ. ಕೆಲವು ಸಮುದಾಯದ ಆಚರಣೆಗಳು ಕೂಡ ಅಗ್ನಿಯಂತಹ ಧಾರ್ಮಿಕ ಕಾರ್ಯಗಳಿಗಾಗಿ ರಾಶಿಗಟ್ಟಲೆ ಮರಗಳನ್ನು ಹನನ ಮಾಡಲಾಗುತ್ತದೆ. ಮನುಷ್ಯನ ವಿಕಾಸವಾದಂತೆ ಪರಿಸರದ ವಿನಾಶವು ಆರಂಭವಾಯಿತು. ಪ್ರತಿದಿನ ದೇಶದಲ್ಲಿ 250 ಲಕ್ಷಟನ್ ಕಸ ಉತ್ಪಾದನೆಯಾಗುತ್ತಿದೆ, ಆದ್ದರಿಂದ ಬಳಸಿ ಬಿಸಾಡುವ ವಸ್ತುಗಳನ್ನು ಬಳಸುವ ಹವ್ಯಾಸದಿಂದಲೂ ಪರಿಸರಕ್ಕೆ ಧಕ್ಕೆಯಾಗುತ್ತದೆ, ಆದ್ದರಿಂದ ಪ್ರತಿಯೊಬ್ಬರೂ ಬಳಸಿಬಿಸಾಡುವ ವಸ್ತುಗಳನ್ನು ತ್ಯಜಿಸುವ ಸಂಕಲ್ಪ ಮಾಡಬೇಕೆಂದು ಸಲಹೆಮಾಡಿದರು.



ಪರಿಸರ ಅಧಿಕಾರಿ ದೊಡ್ಡ ಶಾಣಯ್ಯ ಪ್ರಸ್ತಾವಿಕವಾಗಿ ಮಾತನಾಡಿದರು, ಎಸ್.ಎಲ್. ಆರ್. ಕಂಪನಿಯ ಉಪಾಧ್ಯಕ್ಷ ನವೀನ್ ಕುಮಾರ್ ಅಧ್ಯಕ್ಷತೆವಹಿಸಿದ್ದರು, ಹಿರಿಯ ಪರಿಸರ ಅಧಿಕಾರಿ ಬಿ.ಎಸ್.ಮುರಳಿಧರ, ಕಾಲೇಜಿನ ಪ್ರಾಂಶುಪಾಲ ಅಂಜನ್ ಕುಮಾರ್, ರಾಜ್ಯಮಟ್ಟದ ಪರಿಸರ ತಜ್ಞರ ಸಮಿತಿ ಸದಸ್ಯ ರವಿಕುಮಾರ ಯಾದವ್, ಪ.ಪಂ.ಮುಖ್ಯಾಧಿ ಕಾರಿ ಎಂ.ಖಾಜಾ, ಸ.ಪ್ರ.ದ.ಕಾಲೇಜ್ ಪ್ರಾಚಾರ್ಯ ಮಲ್ಲಿಕಾರ್ಜುನ, ಕಂಪನಿಯ ಮಾನವಸಂಪನ್ಮೂಲ ವಿಭಾಗದ ಮುಖ್ಯಸ್ಥ ರಾಘವಾಂಕ ಮಾತನಾಡಿ ದರು. ನಂತರ ಕಂಪನಿ ಹಮ್ಮಿಕೊಂಡ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕಾಲೇಜು ವಿಧ್ಯಾರ್ಥಿಗಳಿಂದ ಪರಿಸರ ಕಾಳಜಿ ಕುರಿತ ರೂಪಕಗಳು ಜರುಗಿದವು. ನಂತರ ವಿವಿದೆಡೆ 600 ಸಸಿಗಳನ್ನು ನೆಡಲಾಯಿತು.

# ಗುರಿ ಸಾಧನೆಗೆ ಪರಿಶ್ರಮವಿರಲಿ

### ದಶಕದಿಂದ ಉಚಿತ ನೋಟ್ ಬುಕ್ ವಿತರಣೆ
### ವಿದ್ಯಾರ್ಥಿಗಳಿಗೆ ಎಚ್.ಎಂ.ಸಿದ್ದಲಿಂಗಯ್ಯಸ್ವಾಮಿ ಸಲಹೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸೌಲಭ್ಯಗಳ ಕೊರತೆ ಎನ್ನದೇ ಇರುವ ಸಂಪನ್ಮೂಲಗಳನ್ನೆ ಬಳಸಿಕೊಂಡು ಶಿಕ್ಷಕರ ಮಾರ್ಗದರ್ಶನದಲ್ಲಿ ನಿರಂತರ ಅಭ್ಯಾಸ ಮಾಡಿದರೆ ನಾಡಿನ ಗಮನ ತನ್ನೂರಿನತ್ತ ಸೆಳೆಯಲು ಸಾಧ್ಯ ಎಂದು ಎಚ್.ಎಂ.ಸಿದ್ದಲಿಂಗಯ್ಯಸ್ವಾಮಿ ಹೇಳಿದರು.

ತಾಲೂಕಿನ ಕಾಕುಬಾಳು ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಹೊಸಪೇಟೆಯ ಎಚ್.ಎಂ.ಸಿದ್ದಲಿಂಗಯ್ಯ ಸ್ವಾಮಿ ಅವರು ಸತತ ಹತ್ತನೇ ವರ್ಷದ ನೋಟ್ ಬುಕ್ ವಿತರಿಸಿ ಮಾತನಾಡಿದರು. ಶಿಕ್ಷಣ ಯಾರೊಬ್ಬರ ಸ್ವತ್ತಲ್ಲ. ಛಲ, ನಿಷ್ಠೆ, ಪರಿಶ್ರಮ ಮೈಗೂಡಿಸಿಕೊಂಡರೆ ನಿರೀಕ್ಷಿತ ಗುರಿ ಸಾಧಿಸಬಹುದು. ವಿದ್ಯಾರ್ಥಿಗಳು ನಿತ್ಯ ಅಭ್ಯಾಸದಲ್ಲಿ ತೊಡಗಿ ಗ್ರಾಮದ ಕೀರ್ತಿಯನ್ನು ಹೆಚ್ಚಿಸಿ ಎಂದರು.

ಗ್ರಾಮದ ಮುಖಂಡರಾದ ಮೃತ್ಯುಂಜಯ ಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಎಮ್ ಜಡಿಯಪ್ಪ, ಉಪಾಧ್ಯಕ್ಷ ಗುರುಬಸವರಾಜ್, ಮುಖಂಡರಾದ ತಮ್ಮನಾಳೆಪ್ಪ ಭುವನಹಳ್ಳಿ, ಜಿ ಹನುಮಂತ್ ರೆಡ್ಡಿ, ಎಚ್.ಹನುಮಂತರೆಡ್ಡಿ, ಕೆ.ವಿ.ಜಂಬಣ್ಣ, ವೀರಭದ್ರಪ್ಪ, ಶಾಲಾ ಮುಖ್ಯೋಪಾಧ್ಯಾಯ ಸುರೇಶ್ ಹಾಗೂ ರಾಮಚಂದ್ರಪ್ಪ ಸಾಹ ಶಿಕ್ಷಕರು ಉಪಸ್ಥಿತರಿದ್ದರು. ಪುಸ್ತಕ ಸ್ವೀಕರಿಸಿದ ವಿದ್ಯಾರ್ಥಿಗಳು ಹರ್ಷವ್ಯಕ್ತಪಡಿಸಿದರು. ಪುಸ್ತಕ ದಾನಿ ಎಚ್.ಎಂ.ಸಿದ್ದಲಿಂಗಸ್ವಾಮಿ ದಂಪತಿಯನ್ನು ಸನ್ಮಾನಿಸಲಾಯಿತು.

# ಇತಿಹಾಸದ ಮಗ್ಗಲುಗಳ ಅರಿವು ಅಗತ್ಯ

ಮೂರನೆ ಪುಟದಿಂದ

ಇತಿಹಾಸವನ್ನು ಬರೆವಣೆಗೆಯೂ ಅನೇಕ ಆಕಾರಗಳ ಆಧಾರದ ಮೇಲೆ ಸತ್ಯಾಂಶ ಶೋಧನೆಯಾಗಿದೆ. ಇತಿಹಾಸವು ಧಾರ್ಮಿಕ ಚರಿತ್ರೆ, ರಾಜಕೇಂದ್ರಿತ ಚರಿತ್ರೆ, ಸಮುದಾಯ ಕೇಂದ್ರಿತ ಚರಿತ್ರೆ ಹೀಗೆ ಪ್ರಕಾರಗಳನ್ನು ಒಳಗೊಂಡಿರುವುದು. ಇದನ್ನು ಕಟ್ಟಿಕೊಡುವಲ್ಲಿ ಯುವ ಸಂಶೋಧನಾರ್ಥಿಗಳು ಕೆಲವು ಸೂಕ್ಷ್ಮಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮುಖ್ಯಸ್ಥ ಡಾ. ವಾಸುದೇವ ಬಡಿಗೇರ ಅವರು ವಿಜಯನಗರ ಪೂರ್ವ ಇತಿಹಾಸ ಎಂಬ ವಿಷಯ ಕುರಿತ ಉಪನ್ಯಾಸದಲ್ಲಿ ಮಾತನಾಡಿ, ಹಂಪಿ ಪ್ರದೇಶವು ಪ್ರಾಕೃತಿಕ ಮತ್ತು ಸಾಂಸ್ಕೃತಿಕ ವಿಷಯಗಳಿಂದ ವಿಶ್ವ ಪ್ರಸಿದ್ಧ ತಾಣ. ಜೀವನದಲ್ಲಿ ಎಲ್ಲವನ್ನು ಕಳೆದುಕೊಂಡವರು ಹಂಪಿಗೆ ಬಂದರೆ ಜೀವನದಲ್ಲಿ ಮರಳಿ ಅವುಗಳನ್ನು ಪಡೆದುಕೊಳ್ಳುತ್ತಾರೆ ಎಂಬುದು ಪುರಾಣಗಳಲ್ಲಿ ಉಲ್ಲೇಖವಾಗಿರುವುದು. ಇದರಿಂದ ಹಂಪಿ ಧಾರ್ಮಿಕ ಕ್ಷೇತ್ರವಾಗಿಯೂ ಪ್ರಸಿದ್ಧಿಯನ್ನು ಪಡೆದಿದೆ. ಹಂಪಿ ಇತಿಹಾಸ ಆರಂಭವಾಗುವುದು ಪಂಪಾ ಕ್ಷೇತ್ರದಿಂದ ಅಥವಾ ಪಂಪ ಸರೋವರದಿಂದ. ಮಾನವನು ಧಾರ್ಮಿಕವಾಗಿ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶಿವ ಪಾರ್ವತಿಯರ ವಿವಾಹ ಸ್ಥಳ ಇದಾಗಿದೆ ಎಂದು ಜನಪದರ ನಂಬಿಕೆಯಾಗಿದೆ. ವಿಜಯನಗರಕ್ಕೆ ಇಲ್ಲಿನ ಅಧಿದೇವತೆಯಾದ ವಿರೂಪಾಕ್ಷನೆ ಒಡೆಯನಾಗಿದ್ದಾನೆ. ಇವನ ಹೆಸರಿನಲ್ಲಿಯೇ ಅರಸರು ಶಾಸನಗಳು ಹೊರಡಿಸಿರುವುದನ್ನು ಕಾಣಬಹುದು ಒಂದು ರೀತಿಯಲ್ಲಿ ಹಂಪಿ ಇಲ್ಲಿನ ಜನಜೀವನದಲ್ಲಿ ಹಾಸುಹೊಕ್ಕಾಗಿದೆ ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗ ಪ್ರಾಧ್ಯಾಪಕ ಡಾ.ಎಸ್.ವೈ. ಸೋಮಶೇಖರ್ ಅವರು ಕಲೆ ಮತ್ತು ವಾಸ್ತುಶಿಲ್ಪ ವಿಷಯ ಕುರಿತು ಮಾತನಾಡಿ ವಿಜಯನಗರ ಪೂರ್ವ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳು ಪಾಂಸನ ಶೈಲಿಯಲ್ಲಿರುವುದನ್ನು ಕಾಣುತ್ತೇವೆ. ವಿಜಯನಗರ ಸಾಮಾಜ್ರ್ಯದಲ್ಲೂ ಸಂಗಮ ಮತ್ತು ಸಾಳುವ ಮನೆತನಗಳು ಈ ಪಾಂಸನ ಶೈಲಿಯಲ್ಲಿಯೇ ದೇವಾಲಯಗಳನ್ನು ನಿರ್ಮಿಸಿದ್ದಾರೆ. ತುಳುವ ಮನೆತನದ ಆಡಳಿತಾವಧಿಯಲ್ಲಿ ದ್ರಾವಿಡ ಶೈಲಿ ಪ್ರಬುದ್ಧಮಾನಕ್ಕೆ ಬಂದಿರುವುದನ್ನು ಕಾಣಬಹುದಾಗಿದೆ. ವಿಜಯನಗರ ಸಾಮ್ರಾಜ್ಯದ ವೈಭವವನ್ನು ಸಾರುವಲ್ಲಿ ವಿರುಪಾಕ್ಷ ಬಜಾರು, ವಿಠಲ ಬಜಾರು, ಕೃಷ್ಣ ಬಜಾರು, ಪಾನ್‌ಸುಪಾರಿ ಬಜಾರು ಸೇರಿದಂತೆ ಏಳು ಪ್ರಮುಖ ಬಜಾರುಗಳು ಮಹತ್ವದ್ದಾಗಿವೆ. ದೇವಾಲಯಗಳ ಮುಂದಿರುವ ವಿವಿಧ ಬಜಾರಗಳಲ್ಲಿ ವಾರದ ಒಂದೊಂದು ದಿನ ಸಂತೆ ನಡೆಯುತ್ತಿತ್ತು. ಹಂಪಿ ಸುತ್ತಮುತ್ತಲಿನ ಬೆಟ್ಟ ಗುಡ್ಡಗಳು ಆದಿ ಮಾನವನ ನೆಲೆಗಳಾಗಿವೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಜಮಖಂಡಿಯ ಬಿ.ಎಲ್.ಡಿ.ಇ ಮಹಾವಿದ್ಯಾಲಯ ಸ್ನಾತಕೋತ್ತರ ಇತಿಹಾಸ ಮತ್ತು ಪುರತತ್ವ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ ಎಸ್ ಪಾಟೀಲ್, ಸಹಾಯಕ ಪ್ರಾಧ್ಯಾಪಕರಾದ ಶ್ರೀನಿವಾಸ ಕಟ್ಟಿಮನಿ ಮತ್ತು ವಿವಿಧ ವಿಭಾಗಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನೀರಿನ ಟ್ಯಾಂಕ್ ವಾರಕ್ಕೊಮ್ಮೆ ಸ್ವಚ್ಚಗೊಳಿಸಿ

### ಜಿಪಂ ಉಪ ಕಾರ್ಯದರ್ಶಿ ಗಿರಿಜಾ ಶಂಕರ್ ಹೇಳಿಕೆ । ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆಯ ಲಾರ್ವಾ ನಿರ್ಮೂಲನಾ ಜಾಗೃತಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಎಲ್ಲಾ ಶಾಲೆ, ಅಂಗನವಾಡಿ ಕೇಂದ್ರಗಳಲ್ಲಿನ ನೀರು ಸಂಗ್ರಹಾರಕಗಳನ್ನು ವಾರಕ್ಕೊಮ್ಮೆ ಸ್ವಚ್ಚಗೊಳಿಸಬೇಕು. ಡೆಂಗ್ಯು ಹರಡದಂತೆ ಎಚ್ಚರವಹಿಸಬೇಕು ಎಂದು ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ ಗಿರಿಜಾ ಶಂಕರ್ ಅವರು ಹೇಳಿದರು.

ರಾಜ್ಯ ಸರ್ಕಾರದ ನಿರ್ದೇಶನದಂತೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆಯ ಲಾರ್ವಾ ನಿರ್ಮೂಲನಾ ದಿನದ ಅಂಗವಾಗಿ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾದ ಸಮೀಕ್ಷೆ ಹಿನ್ನಲೆ ಶುಕ್ರವಾರ ಬಂಡಿಹಟ್ಟಿ ಬಡಾವಣೆಯಲ್ಲಿ ಮನೆಗಳು ಸೇರಿದಂತೆ ಶಾಲೆ, ಅಂಗನವಾಡಿಗಳಲ್ಲಿ ನೀರು ಸಂಗ್ರಹಾರಕಗಳನ್ನು ಪರಿಶೀಲಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಎಲ್ಲಡೆ ಡೆಂಗ್ಯು ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದ್ದು, ಬಳ್ಳಾರಿ ಜಿಲ್ಲೆಯಲ್ಲಿ ರೋಗ ನಿಯಂತ್ರಣಕ್ಕೆ ಸಮರೋಪಾದಿಯಲ್ಲಿ ಅಂತರ ಇಲಾಖೆಗಳ ಸಮನ್ವಯೊಂದಿಗೆ ಸಾರ್ವಜನಿಕರಿಗೆ ಜಾಗೃತಿ ನೀಡಲಾಗುತ್ತಿದೆ. ಸೊಳ್ಳೆಗಳ ಉತ್ಪತ್ತಿ ತಾಣಗಳನ್ನು ನಾಶಮಾಡಲು ಬಳಕೆಗಾಗಿ ನೀರು ತುಂಬುವ ಪರಿಕರಗಳನ್ನು ಸ್ವಚ್ಚಗೊಳಿಸಬೇಕು ಮತ್ತು ತಪ್ಪದೇ ಮುಚ್ಚಳ ಮುಚ್ಚಬೇಕು. ಬಟ್ಟೆಯನ್ನು ಕಟ್ಟುವ ಮೂಲಕ ರೋಗ ತಡೆಗೆ ಸೊಳ್ಳೆಗಳ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರ ನೀಡಬೇಕು ಎಂದು ಹೇಳಿದರು.



ಮನೆಗಳಲ್ಲಿಯ ನೀರು ಸಂಗ್ರಹಾರಕಗಳಲ್ಲಿ ಲಾರ್ವಾ(ಸೊಳ್ಳೆಮರಿ) ಕಂಡುಬಂದಲ್ಲಿ ಖಾಲಿ ಮಾಡಿಸಬೇಕು. ಈ ಕುರಿತು ವ್ಯಾಪಕ ಪ್ರಚಾರ ನೀಡುವಂತೆ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು ಅವರು ಮಾತನಾಡಿ, ಡೆಂಗ್ಯುಗೆ ನಿರ್ದಿಷ್ಟವಾದ ಚಿಕಿತ್ಸೆ ಇರುವುದಿಲ್ಲ. ಲಕ್ಷಣಗಳಾಧರಿಸಿ ಚಿಕಿತ್ಸೆ ನೀಡಲಾಗುವುದು. ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧ ದಾಸ್ತಾನು ಲಭ್ಯವಿದೆ ಎಂದು ಅವರು ತಿಳಿಸಿದರು.

ಸಾರ್ವಜನಿಕರು ಮನೆಯಲ್ಲಿ ಯಾರಿಗಾದರೂ ಜ್ವರ ಕಂಡು ಬಂದಲ್ಲಿ ಹತ್ತಿರದ ಸರಕಾರಿ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಬೇಕು. ಜೊತೆಗೆ ಗ್ರಾಮ ಮತ್ತು ವಾರ್ಡ್‌ಗಳಲ್ಲಿ ಪ್ರತಿ ಮನೆಗೂ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಒಳಗೊಂಡ ವೈದ್ಯಕೀಯ ತಂಡ ಆಗಮಿಸಿದಾಗ ಮನೆಯ ಒಳ ಹಾಗೂ ಹೊರ ಆವರಣದಲ್ಲಿ ಸೊಳ್ಳೆ ಸಂತತಿ ವೃದ್ದಿಯಾಗುವ ಪರಿಕರಗಳಾದ ಡ್ರಮ್, ಬ್ಯಾರೆಲ್, ಕಲ್ಲಿನಡೋಣಿ, ಸಿಮೆಂಟ್ ತೊಟ್ಟಿ ಮುಂತಾದವುಗಳನ್ನು ತಪಾಸಣೆಗೆ ಅವಕಾಶ ಮಾಡಿಕೊಡಬೇಕು.

ಲಾರ್ವಾ (ಸೊಳ್ಳೆ ಮರಿ) ಕಂಡುಬಂದಲ್ಲಿ ಖಾಲಿ ಮಾಡಬೇಕು. ಕೇವಲ ಪಾತ್ರೆ, ಬಟ್ಟೆ ತೊಳೆಯಲು ಬಳಸುತ್ತಿದ್ದಲ್ಲಿ ಹಾನಿಕಾರವಲ್ಲದ ಟೆಮೊಫಾಸ್ ರಾಸಾಯನಿಕ ಹಾಕಲಾಗುತ್ತದೆ. ಸಾರ್ವಜನಿಕರು ಪ್ರತಿ ಶುಕ್ರವಾರ ಮನೆ ಸುತ್ತಲಿನ ಟೈರ್, ತಗಡಿನ ಡಬ್ಬ, ಪ್ಲಾಸ್ಟಿಕ್ ಕಪ್, ಇತರೆ ಮಳೆ ನೀರು ನಿಲ್ಲಬಹುದಾದ ವಸ್ತುಗಳನ್ನು ವಿಲೇವಾರಿ ಮಾಡಿ ಡೆಂಗ್ಯೂ ರೋಗ ತಡೆಗೆ ಸಹಕರಿಸಬೇಕು ಎಂದು ವಿನಂತಿಸಿದರು.

ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ, ಬಂಡಿಹಟ್ಟಿ ವೈದ್ಯಾಧಿಕಾರಿ ಡಾ.ಯಾಸ್ಮೀನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಜಿಲ್ಲಾ ಪಂಚಾಯತ್‌ನ ಅಧಿಕಾರಿ ಚಂದ್ರಶೇಖರ ಹಿರೇಮಠ, ಎನ್‌ವಿಬಿಡಿಸಿ ಜಿಲ್ಲಾ ಸಲಹೆಗಾರ ಪ್ರತಾಪ್, ಶಾಲಾ ಮುಖ್ಯಗುರುಗಳಾದ ವಿರುಪಾಕ್ಷಪ್ಪ, ಹೆಚ್‌ಐಓ, ಮಹಾಲಿಂಗ ಸೇರಿದಂತೆ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

# ಆದಾಯಕ್ಕೂ ಮಿಗಿಲಾದ ಆದಾಯ ಬೇಡವೆಂದ ಶರಣರು

ಮೊದಲ ಪುಟದಿಂದ

ಹುಲ್ಲನ್ನ ಕೊಯ್ಯುವಾಗ, ಕೊರಳಲ್ಲಿನ ಲಿಂಗವು ಜಾರಿ ನೀರಿಗೆ ಬಿದ್ದರೂ ಸಹ, ಆತ ತನ್ನ ಕಾಯಕದಿಂದ ವಿಚಲಿತನಾಗದೇ ಕಾಯಕದಲ್ಲೇ ತೊಡಗುವನು. ಹೀಗೆ ಶರಣರಿಗೆ ದೇಹವೇ ದೇವಾಲಯ ಕಾಯಕವೇ ನಿಜ ಕೈಲಾಸವಾಗಿ, ಶರಣರ ವಚನಗಳಲ್ಲಿ ಅವರ ವೃತ್ತಿ ಕಾಯಕಗಳ ಪರಮ ನಿಷ್ಠೆ ಕಾಣುತ್ತೇವೆ ಎಂದರು.

ಹೊಸಪೇಟೆ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಸೌಭಾಗ್ಯಲಕ್ಷ್ಮಿ ಉದ್ಘಾಟಿಸಿ ಮಾತನಾಡಿ ವಿಶ್ವಗುರು ಬಸವಣ್ಣನವರ ಶರಣ ತತ್ವ, ವೈಚಾರಿಕತೆ ನೋಟದ ಕಾಯಕ ಸಿದ್ಧಾಂತ, ಸಾಮಾಜಿಕ ಧಾರ್ಮಿಕ ಸಮಾನತೆಯ ವೃತ್ತಿ ಸಮತೆಯ ಕಾಯಕ ಸಿದ್ಧಾಂತವು ನವ ಸಮಾಜ ನಿರ್ಮಾಣದ ಪರಿಕಲ್ಪನೆಯಾಗಿತ್ತು ಎಂದು ಅಭಿಪ್ರಾಯ ಪಟ್ಟರು.

ದತ್ತಿ ದಾನಿ ಲಕ್ಷ್ಮಣ ಕರಿಭೀಮಣ್ಣನವರ್ ಮಾತನಾಡಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶಿಕ್ಷಕ ಕೆ. ಪ್ರಕಾಶ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ವಿದ್ಯಾರ್ಥಿ ಎನ್ ಟಿ. ರಮೇಶ ಪ್ರಾರ್ಥಿಸಿದರು. ಪರಿಷತ್ತಿನ ಕಾರ್ಯದರ್ಶಿ ಮುದೇನೂರು ಉಮಾಮಹೇಶ್ವರ ಸ್ವಾಗತಿಸಿದರು. ಗಾಯಕಿ ಪುಷ್ಪಾ ಮಲ್ಲಿಕಾರ್ಜುನ ಅವರು ವಚನ ಗಾಯನ ಮಾಡಿದರು. ಶಿಕ್ಷಕ ಒಪ್ಪತ್ತೇಶ್ವರ ವಂದಿಸಿದರು. ಪರಿಷತ್ತಿನ ಡಾ.ಗುಂಡಿ ಮಾರುತಿ, ಸೋ ದಾ ವಿರೂಪಾಕ್ಷಗೌಡ, ಯಮನಪ್ಪ, ಇತರರು ಪಾಲ್ಗೊಂಡಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA